ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಫೆಬ್ರವರಿ 2016 ಮಾಸ ಪತ್ರಿಕೆ

ಸಂಪುಟ : 38
ಸಂಚಿಕೆ : 05
ಪುಟ : 20
ಬೆಲೆ : ₹ 10/–



ಬೆಂಗಳೂರು ಉತ್ತರ ಜಿಲ್ಲೆಯ 26–1–2016 ರ ಸಂಕಲ್ಪ ದಿನಾಚರಣೆ ಸಮಾರಂಭದಲ್ಲಿ ನಡೆಯುತ್ತಿರುವ **ಗುರು ಪೂಜೆ**



19–1–2016 ರಂದು ಗುಲ್ಬರ್ಗಾ ಜಿಲ್ಲಾ ಘಟಕ ಏರ್ಪಡಿಸಿದ್ದ ಸಂಕಲ್ಪ ದಿನ ಸಮಾರಂಭದಲ್ಲಿ ಪ.ಪೂ. ಪರಮಾನಂದ ಸ್ವಾಮೀಜಿ ಹಾಗೂ ರಾಜ್ಯ ಸಭಾ ಸದಸ್ಯರಾದ ಬಸವರಾಜ ಪಾಟೀಲ್ ಸೇಡಂ



ಶಿಕ್ಷಕ ಸಮಸ್ಯೆಗಳ ಬಗ್ಗೆ ಅರುಣ್ ಶಹಾಪುರ್ ಮತ್ತು ಶಿವಾನಂದ ಸಿಂಧನೇಕರ ಅವರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುತ್ತಿರುವುದು

4
ಮಾದರಿ ಪ್ರಶ್ನೆ ಪತ್ರಿಕೆ ಗಣಿತ

13
ಸಿಸಿಇ ಕುರಿತು ಶಾಸಕ ಅರುಣ ಶಹಾಪೂರ ಅವರ ಪ್ರಶ್ನೆಗಳಿಗೆ ಶಿಕ್ಷಣ ಸಚಿವರ ಉತ್ತರ

16
ಸಂಘದ ವಾರ್ತೆ

# ಸಂಪಾದಕೀಯ

ಶಿಕ್ಷಕರಿಗೆ 'ಗುರು'ವಿನ ಮಹತ್ವದ ಸ್ಥಾನ ಅನಾದಿಕಾಲದಿಂದಲೂ. 'ಗುರು' ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಸಮ ಎಂಬ ಭಾವನೆ. ಆದರೆ ಇತ್ತೀಚೆಗೆ ಸಮಾಜದಲ್ಲಿ ಶಿಕ್ಷಕರ ಬಗೆಗಿನ ಗೌರವ ಕಡಿಮೆಯಾಗುತ್ತಿದೆ, ಒಂದು ಬಗೆಯ ತಾತ್ಸಾರ ಎಂಬ ಬೇಸರ ಶಿಕ್ಷಕ ವೃಂದದಲ್ಲಿ. ಈ ಸಂಗತಿ ಸ್ವಲ್ಪ ಮಟ್ಟಿಗೆ ಹೌದೆಂದೆನಿಸಿದರೂ, ಶ್ರದ್ಧೆಯಿಂದ ದುಡಿಯುವ ಶಿಕ್ಷಕರಿಗೆ ಈಗಲೂ ಗೌರವ, ಆದರಗಳು ಇದ್ದೇ ಇದೆ ಎಂದರೆ ತಪ್ಪಾಗಲಾರದು. ಅದರಲ್ಲೂ ಅವರು ರೂಪಿಸಿದ ಶಿಷ್ಯರಿಗೆ ತಮ್ಮ ಶಿಕ್ಷಕರ ಬಗ್ಗೆ ಅಪಾರ ಪ್ರೀತಿ, ಗೌರವ, ಕಾಳಜಿ. ಇದಕ್ಕೆ ಇತ್ತೀಚೆಗೆ ನಡೆದ ಒಂದು ಸರಳ ಸಮಾರಂಭ ಸಾಕ್ಷಿ.

ನಾನು ಕೆಲಸ ಮಾಡುತ್ತಿದ್ದ ಶಾಲೆಯಲ್ಲಿ ತಮ್ಮ ನಿವೃತ್ತಿಯ ನಂತರ ಶ್ರೀ ವೆಂಕಟರಮಣ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಮೊದಲು ಸೇಂಟ್ ಜೋಸೆಫ್ ಶಾಲೆಯ ಶಿಕ್ಷಕರು. ಕೆಲವು ದಿವಸಗಳ ಹಿಂದೆ ಒಂದು ದಿನ ಅವರು ನಮಗೆಲ್ಲಾ ಸಿಹಿ ಹಂಚಿದರು. ನಾನು ಕಾರಣ ಕೇಳಿದೆ. ಅವರು ಹೀಗೆ ಹೇಳಿದರು. ನನ್ನ ಹಳೆಯ ವಿದ್ಯಾರ್ಥಿ ಶ್ರೀ ಮೋಹನ ದಾಸ್ ಪೈ. ಅವರು ಈಗ ಪ್ರತಿಷ್ಠಿತ ಇನಫೋಸಿಸ್ ಸಂಸ್ಥೆಯಲ್ಲಿ ಅತ್ಯಂತ ಉನ್ನತ ಹುದ್ದೆಯಲ್ಲಿದ್ದಾರೆ. ಅವರು ಸರಳ ಸಮಾರಂಭ ಏರ್ಪಡಿಸಿದ್ದರು. ಅದರಲ್ಲಿ ತಾವು ಓದಿದ ಶಾಲೆಯ ಅಧ್ಯಾಪಕರನ್ನೆಲ್ಲ ಗೌರವಿಸಿದರು. ಪ್ರತಿ ಶಿಕ್ಷಕರಿಗೂ 1ಲಕ್ಷ 10 ಸಾವಿರ ರೂಪಾಯಿಗಳನ್ನು ಗೌರವಧನವಾಗಿ ನೀಡಿದರು. ಆ ಸಂತೋಷವನ್ನು ಹಂಚಿಕೊಳ್ಳಲು ಈ ಸಿಹಿ ಕೊಡುತ್ತಿದ್ದೇನೆ. ಅವರ ಮಾತುಗಳನ್ನು ಕೇಳಿ ನನ್ನ ಹೃದಯ ತುಂಬಿ ಬಂತು. ಶಾಲೆಯ ಓದು ಮುಗಿದು ಎಷ್ಟೋ ವರ್ಷಗಳಾದರೂ ತಮ್ಮನ್ನು ರೂಪಿಸಿದ ಶಿಕ್ಷಕರನ್ನು ಮರೆಯದೆ ಪ್ರೀತಿಯಿಂದ ಗೌರವಿಸಿದ ಆ ಶಿಷ್ಯ ವಾತ್ಸಲ್ಯ ನಿಜಕ್ಕೂ ಶ್ಲಾಘನೀಯ ಎನಿಸಿತು. ಇಂತಹ ಶಿಷ್ಯರನ್ನು ಪಡೆದ ಶಿಕ್ಷಕರ ಬದುಕು ಸಾರ್ಥಕವಲ್ಲವೇ? ಈ ಬಗೆಯ ಶ್ರೇಷ್ಠ ಶಿಕ್ಷಕ – ಶಿಷ್ಯ ವೃಂದ ಹೆಚ್ಚಾಗಲಿ ಎಂದು ಹಾರೈಸೋಣ.

ಇತ್ತೀಚಿನ ದಿನಗಳಲ್ಲಿ ಸಮಾಜಕ್ಕೆ ಮಹಿಳೆಯರ ಕೊಡುಗೆ ಅಪಾರ. ಕುಟುಂಬ ನಿರ್ವಹಣೆಯಿಂದ ಹಿಡಿದು ರಾಷ್ಟ್ರದ ಅಭಿವೃದ್ಧಿಯ ಎಲ್ಲ ರಂಗಗಳಲ್ಲೂ ಸ್ತ್ರೀಯರ ಸಾಧನೆ ಗಣನೀಯವಾಗಿ ಹೆಚ್ಚಾಗಿದೆ. ಸ್ತ್ರೀಯರ ಕಾರ್ಯಕ್ಷಮತೆ, ತಾಳ್ಮೆ , ಸಾಧನೆಗಳನ್ನು ಕಂಡು ರಾಷ್ಟ್ರಕವಿ ಡಾ|| ಜಿ.ಎಸ್. ಶಿವರುದ್ರಪ್ಪನವರು ವಿಸ್ಮಿತರಾಗಿ 'ನಿನಗೆ ಬೇರೆ ಹೆಸರು ಬೇಕೆ; "ಸ್ತ್ರೀ"ಎಂದರೆ ಅಷ್ಟೆ ಸಾಕೆ' ಎಂದು ಬರೆದಿದ್ದಾರೆ. ಆ ಒಂದು ಅಕ್ಷರದಲ್ಲಿ ಮಾತಿಗೆ ಮೀರಿದ ಭಾವನೆ ಇರುವುದನ್ನು ವ್ಯಕ್ತಪಡಿಸಿದ್ದಾರೆ. ಜಗತ್ತಿನ ಎಲ್ಲಾ ಮಹಿಳೆಯರಿಗೆ ಗೌರವವನ್ನು ಸೂಚಿಸುವ ದಿನ ಮಾರ್ಚ್ 8, ಅಂತರ ರಾಷ್ಟ್ರೀಯ ಮಹಿಳಾ ದಿನ. ಈ ಸಂದರ್ಭದಲ್ಲಿ ಶಿಕ್ಷಕಿಯರಿಗೆಲ್ಲಾ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಾರ್ದಿಕ ಶುಭಾಶಯಗಳು.

ಫೆಬ್ರವರಿ 21 ಅಂತರ ರಾಷ್ಟ್ರೀಯ ಮಾತೃಭಾಷಾ ದಿನ. ಮಾತೃಭಾಷೆಯ ಮಹತ್ವ ಅಪಾರ. ಜಗತ್ತಿನಾದ್ಯಂತ ಮಾತೃಭಾಷೆಗೆ ಪ್ರಾಮುಖ್ಯತೆ ನೀಡಬೇಕಾದುದು ಅವಶ್ಯ. ಅದರಲ್ಲೂ ಮಾತೃಭಾಷೆಯ ಮೂಲಕ ಶಿಕ್ಷಣ ಪರಿಣಾಮಕಾರಿ ಎಂಬುದರಲ್ಲಿ ಎರಡು ಮಾತಿಲ್ಲ. ನಮ್ಮ ನಾಡಿನಲ್ಲಿ ಮಾತೃಭಾಷೆಗೆ ನೀಡುತ್ತಿರುವ ಆದ್ಯತೆ ಕಡಮೆ ಎನಿಸುತ್ತದೆ. ಮಾತೃಭಾಷೆಯ ಅಭಿವೃದ್ಧಿಗೆ ಜನತೆ–ಸರ್ಕಾರ ಇಬ್ಬರೂ ಮನಸ್ಸು ಮಾಡಬೇಕು.

ಸಮಾಜದ ಏಳಿಗೆಗೆ ವಿಜ್ಞಾನ ಬೇಕೇಬೇಕು. ಅದನ್ನು ನೆನಪಿಸುವ ದಿನ ರಾಷ್ಟ್ರೀಯ ವಿಜ್ಞಾನ ದಿನ, ಫೆಬ್ರವರಿ 28ರಂದು. ಈ ಸಂದರ್ಭದಲ್ಲಿ ಜನರಲ್ಲಿ, ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಹೆಚ್ಚಾಗಿಸುವ ಪ್ರಯತ್ನವಾಗಲಿ ಎಂದು ಆಶಿಸೋಣ.

ಸಂಪಾದಕರು

## ಸೂಕ್ತಿ



ಉಪೈತಿ ಲೋಕ ವಿಖ್ಯಾತಂ ಲೋಭ ಮೋಹ ವಿವರ್ಜಿತಂ ।
ಆತ್ಮತತ್ತ್ವ ವಿಚಾರಜ್ಞಂ ವಿಮುಕ್ತ ವಿಷಯಭ್ರಮಮ್ ॥

ಗುರುವಾದವನು ಲೋಕವಿಖ್ಯಾತನೂ, ಲೋಭ ಮೋಹಗಳನ್ನು ತ್ಯಜಿಸಿದವನೂ, ಆತ್ಮತತ್ತ್ವದ ವಿಚಾರವನ್ನು ಬಲ್ಲವನೂ, ವಿಷಯಭ್ರಮೆಯಿಂದ ಮುಕ್ತನೂ ಆಗಿರಬೇಕು.

- ಶ್ರೀ ಸಿದ್ಧಾಂತ ಶಿಖಾಮಣಿ

## ಪರಿವಿಡಿ


- ಮುಖ್ಯಮಂತ್ರಿಗಳಿಗೆ ಶಿಕ್ಷಕರ ಸಮಸ್ಯೆಗಳ ಕುರಿತು ಸಲ್ಲಿಸಿದ ಮನವಿ ಪತ್ರ 3
- ಮಾದರಿ ಪ್ರಶ್ನೆ ಪತ್ರಿಕೆ – ಗಣಿತ 4
- ಮಾದರಿ ಪ್ರಶ್ನೆ ಪತ್ರಿಕೆ : ಸಮಾಜ ವಿಜ್ಞಾನ 8
- ಅರುಣ್ ಶಹಾಪುರರ ಜಾಹೀರಾತು 11
- ಸೂರ್ಯನಾಥ – ನಾನು ಕಂಡಂತೆ 12
- ಸಿಸಿಇ ಕುರಿತು ಶಾಸಕ ಅರುಣ ಶಹಾಪೂರ ಅವರ ಪ್ರಶ್ನೆಗಳಿಗೆ ಶಿಕ್ಷಣ ಸಚಿವರ ಉತ್ತರ 13
- ಸಂಘದ ವಾರ್ತೆ 16
- ಪದಬಂಧ 18
- ಸಂಘದ ವಾರ್ತೆ 19
- ಚಿತ್ರ ಸುದ್ದಿ 20

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರೂ ಹಾಗೂ ವಿಧಾನಪರಿಷತ್ ಸದಸ್ಯರೂ ಆದ ಅರುಣ್ ಶಹಾಪೂರ ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶಿವಾನಂದ ಸಿಂಧನಕೇರಾ ರವರು 13.01.2016 ರಂದು ಮುಖ್ಯಮಂತ್ರಿಗಳಿಗೆ ಶಿಕ್ಷಕರ ಸಮಸ್ಯೆಗಳ ಕುರಿತು ಸಲ್ಲಿಸಿದ ಮನವಿ ಪತ್ರ

**ಪತ್ರ : 1 – ವಿಷಯ: ಸರ್ಕಾರಿ ನೌಕರರಿಗೆ 06ನೇ ವೇತನ ಸಮಿತಿ ನೀಡಿದ 6,7,8 ಸ್ಥಗಿತ ವೇತನ ಬಡ್ತಿ ಸೌಲಭ್ಯವನ್ನು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರರಿಗೂ ವಿಸ್ತರಿಸುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ 06ನೇ ವೇತನ ಸಮಿತಿಯು ಸರ್ಕಾರಿ ನೌಕರರಿಗೆ 1.04.2012ರಿಂದ ಜಾರಿಗೆ ಬರುವಂತೆ ವೇತನ ಶ್ರೇಣಿಯ ಗರಿಷ್ಠ ಹಂತ ತಲುಪಿ ಸ್ಥಗಿತಗೊಂಡಿರುವ ನೌಕರರಿಗೆ 6,7,8 ಸ್ಥಗಿತ ವೇತನ ಬಡ್ತಿ ನೀಡಲಾಗಿರುವುದು. ಆದರೆ ಈ ಸೌಲಭ್ಯವನ್ನು ಕಳೆದ 3 ವರ್ಷಗಳಾದರೂ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯವರಿಗೆ ವಿಸ್ತರಿಸಿರುವುದಿಲ್ಲ. ಆದ್ದರಿಂದ 6,7,8 ಸ್ಥಗಿತ ವೇತನ ಬಡ್ತಿಯನ್ನು ಖಾಗಿ ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರರಿಗೂ ವಿಸ್ತರಿಸುವಂತೆ ಆರ್ಥಿಕ ಇಲಾಖೆಗೆ ನಿರ್ದೇಶನ ನೀಡಲು ಕೋರುವೆವು.

**ಪತ್ರ : 2 – ವಿಷಯ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಕುಮಾರ್ ನಾಯಕ್ ಸಮಿತಿ ವರದಿಯನ್ನು ಜಾರಿಗೆ ತರುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 15.04.2015 ರಂದು ತಮ್ಮ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ವೇತನ ತಾರತಮ್ಯ ಸರಿಪಡಿಸಲು ಶಿಕ್ಷಣ ಕಾರ್ಯದರ್ಶಿಗಳಾದ "ಕುಮಾರ್ ನಾಯಕ್" ಸಮಿತಿಯು ಸಲ್ಲಿಸಿದ ವರದಿಯ ಕುರಿತು ಸುದೀರ್ಘವಾಗಿ ಚರ್ಚೆ ನಡೆದ ನಂತರ ತಾವು ಇದಕ್ಕೆ ತಾತ್ವಿಕವಾಗಿ ಒಪ್ಪಿಗೆ ನೀಡಿದ್ದುಂಟು. ಇದು ಅಲ್ಲದೇ 03.07.2015 ರಂದು ಜರುಗಿದ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಕಿಮ್ಮನೆ ರತ್ನಾಕರ್‌ರವರು ವೇತನ ತಾರತಮ್ಯ ಸಮಸ್ಯೆಯನ್ನು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಪರಿಹರಿಸುವುದಾಗಿ ಭರವಸೆಯನ್ನು ನೀಡಿದ್ದುಂಟು.

ಸದ್ಯ ಪದವಿ ಪೂರ್ವ ಉಪನ್ಯಾಸಕರ ಹಾಗೂ ಪ್ರಾಚಾರ್ಯರ ಸಂಘದವರು "ಕುಮಾರ್ ನಾಯಕ್ ವರದಿ"ಯನ್ನು ಯಥಾವತ್ತಾಗಿ ಜಾರಿಗೆ ತರಲು ಒತ್ತಾಯಿಸಿ ಇಂದು ದಿ: 13.01.2016ರಂದು ಸ್ವಾತಂತ್ರ್ಯ ಉದ್ಯಾನವನದಲ್ಲಿ ಸುಮಾರು 4,000 ಕ್ಕೂ ಹೆಚ್ಚು ಉಪನ್ಯಾಸಕರು, ಪ್ರಾಂಶುಪಾಲರು ಒಂದು ದಿನದ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೆ. ಮತ್ತು ಮುಂಬರುವ ಏಪ್ರಿಲ್ ತಿಂಗಳಿನಲ್ಲಿ ಪದವಿ ಪೂರ್ವ ಉಪನ್ಯಾಸಕರು ಮೌಲ್ಯಮಾಪನ ಬಹಿಷ್ಕಾರಕ್ಕೆ ಕರೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ತಕ್ಷಣ "ಕುಮಾರ್ ನಾಯಕ್ ವರದಿ"ಯನ್ನು ಜಾರಿ ಮಾಡುವ ಕುರಿತು ಆರ್ಥಿಕ ಇಲಾಖೆ ಮತ್ತು ಶಿಕ್ಷಣ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಕೋರುತ್ತೇವೆ.

**ಪತ್ರ : 3 – ವಿಷಯ: ರಾಜ್ಯದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಶಿಕ್ಷಕೇತರ ವರ್ಗದವರ ಕಾಲ್ಪನಿಕ ವೇತನ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಪದವೀಧರರ ಮತ್ತು ಶಿಕ್ಷಕರ ಮತಕ್ಷೇತ್ರಗಳ ವಿಧಾನ ಪರಿಷತ್ ಸದಸ್ಯರುಗಳ ಸಭೆಯನ್ನು ಕರೆಯುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಸೇವೆಗೆ ಸೇರಿದ ದಿನಾಂಕ ಹಾಗೂ ಅನುದಾನಕ್ಕೆ ಒಳಪಟ್ಟ ದಿನಾಂಕ ಹಾಗೂ ಅನುದಾನಕ್ಕೆ ಒಳಪಟ್ಟ ದಿನಾಂಕದ ಮಧ್ಯದ ಅವಧಿಯ ಸೇವೆಯನ್ನು ಪರಿಗಣಿಸಿ ಕಾಲ್ಪನಿಕ ವೇತನ ಬಡ್ತಿ ನೀಡಲು ಮತ್ತು ಈ ಅವಧಿಯನ್ನು ಪಿಂಚಣಿಗೆ ಪರಿಗಣಿಸುವಂತೆ ತೀರ್ಪು ನೀಡಿರುವುದು. ಈ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅನುದಾನರಹಿತ ಅವಧಿಯನ್ನು ಕಾಲ್ಪನಿಕ ವೇತನ ಬಡ್ತಿ, ಪಿಂಚಣಿ ಇತ್ಯಾದಿಗೆ ಪರಿಗಣಿಸಬಾರದು ಎಂದು ಸದನದಲ್ಲಿ ಮಸೂದೆಯನ್ನು ಪಾಸು ಮಾಡಲಾಗಿದೆ. ಆದರೆ ಪಾಸ್ ಮಾಡುವ ಸಂದರ್ಭದಲ್ಲಿ ರೂ. 285.00 ಕೋಟಿ ಮಿತಿಗೆ ಒಳಪಟ್ಟು ಈ ಸಮಸ್ಯೆ ಬಗೆಹರಿಸುವುದಾಗಿ ಹಿಂದಿನ ಉನ್ನತ ಶಿಕ್ಷಣ ಸಚಿವರು ಭರವಸೆ ನೀಡಿದ್ದುಂಟು. ಕಾಲ್ಪನಿಕ ವೇತನ ಸಮಸ್ಯೆಯನ್ನು ಬಗೆ ಹರಿಸುವಲ್ಲಿ ಸರ್ಕಾರದ ಮೇಲೆ ನಿಖರವಾಗಿ ಎಷ್ಟು ಆರ್ಥಿಕ ಹೊರೆ ಬೀಳುವುದು ಎಂಬುದನ್ನು ಪರಿಶೀಲಿಸಿ ವರದಿ ಸಲ್ಲಿಸಿರುವುದು. ಈ ವರದಿಯ ಪ್ರಕಾರ ಸರ್ಕಾರಕ್ಕೆ 352.00ಕೋಟಿ ರೂ ಆರ್ಥಿಕ ಹೊರೆ ಬೀಳುವುದಾಗಿ ತಿಳಿಸಿರುವರು.

ಈ ಮಧ್ಯೆ ಇತ್ತೀಚೆಗೆ ಕರ್ನಾಟಕ ಉಚ್ಚ ನ್ಯಾಯಾಲಯ 2014ರಲ್ಲಿ ಕಾಲ್ಪನಿಕ ವೇತನಕ್ಕೆ ಸಂಬಂಧಿಸಿದ ಮಸೂದೆಯನ್ನು ಅಸಿಂಧು ಎಂದು ತೀರ್ಪು ನೀಡಿರುವುದು. ಮೇಲೆ ತಿಳಿಸಿದ ವಿಚಾರಗಳ ಹಿನ್ನೆಲೆಯಲ್ಲಿ ಕಾಲ್ಪನಿಕ ವೇತನ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ತಮ್ಮ ಅಧ್ಯಕ್ಷತೆಯಲ್ಲಿ ಪದವೀಧರರ ಹಾಗೂ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ತಿನ ಸದಸ್ಯರುಗಳ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಸಭೆಯನ್ನು ಕರೆಯಬೇಕಾಗಿ ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ●

# ಮಾದರಿ ಪ್ರಶ್ನೆ ಪತ್ರಿಕೆ – ಗಣಿತ

ಪ್ರಿಯ ವಿದ್ಯಾರ್ಥಿಗಳೇ,

2015–16 ರ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಒಂದು ನಮೂನೆ Model ಯನ್ನು ನೀಡಲಾಗಿದೆ. ಇದನ್ನು ಪ್ರಸ್ತುತವಿರುವ ನೀಲನಕಾಶೆಯ ರೀತಿಯಲ್ಲಿ ತಯಾರಿಸಲಾಗಿದೆ. ಕಳೆದ ವರ್ಷದ ನೀಲ ನಕಾಶೆಗೂ ಈ ವರ್ಷದ ನೀಲ ನಕಾಶೆಗೂ ಒಂದು ಅಧ್ಯಾಯದ ಹೊರತಾಗಿ ಏನೂ ಬದಲಾವಣೆ ಇಲ್ಲ. ಪ್ರತಿ ಅಧ್ಯಾಯಕ್ಕೆ ಇರುವ ಆದ್ಯತೆ ಬದಲಾಗಿಲ್ಲ ಮತ್ತು 'ಪಾರವಾಹಕ ಜಾಲಾಕೃತಿ' ಈ ಅಧ್ಯಾಯಕ್ಕೆ ಇಟ್ಟಿರುವ ಎರಡು ಅಂಕಗಳನ್ನು 'ಕ್ಷೇತ್ರಗಣಿತ'ದ ಅಧ್ಯಾಯಕ್ಕೆ ಸೇರಿಸಿ 5 ರಿಂದ 7 ಅಂಕಗಳಿಗೆ ಬದಲಾಯಿಸಲಾಗಿದೆ. ಉಳಿದ ಯಾವುದೇ ಬದಲಾವಣೆಯಾಗಿಲ್ಲ.

**ಸಮಯ: 2 ಗಂಟೆ 30 ನಿಮಿಷ** **ಗರಿಷ್ಠ ಅಂಕಗಳು : 80**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಪೂರ್ಣ ಉತ್ತರವನ್ನು ಆರಿಸಿ ಉತ್ತರಿಸಲು ನೀಡಿರುವ ಜಾಗದಲ್ಲಿಯೇ ಬರೆಯಿರಿ.** **8 x 1 = 8**

**1.** ಇವುಗಳಲ್ಲಿ ಯಾವ ಸಂಖ್ಯೆಯನ್ನು 53 ರಿಂದ ಭಾಗಿಸಿದಾಗ ಭಾಗಲಬ್ಧ 34 ಮತ್ತು ಶೇಷ 21 ದೊರೆಯುತ್ತದೆ ?

a) 1823 b) 767 c) 1113 d) 1781

**2.** n(A/B) = 6 , n(B/A)=5 ಮತ್ತು n(A1B) = 7 ಆದಾಗ n(ACB) ಯು

a) 11 b) 12 c) 4 d) 18

**3.** ಒಂದು ಸಮಾಂತರ ಶ್ರೇಢಿಯ 10 ನೇ ಪದ 41 ಮತ್ತು 20 ನೇ ಪದ 81 ಆದಾಗ ಅದರ ಸಾಮಾನ್ಯ ವ್ಯತ್ಯಾಸ

a) 40 b) 4 c) –4 d) 1/4

**4.** ಒಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ತೇರ್ಗಡೆಯಾಗುವ ಸಂಭವನೀಯತೆ 0.7 ಆದಾಗ, ತೇರ್ಗಡೆಯಾಗದೆ ಇರುವ ಸಂಭವನೀಯತೆ

a) 3/10 b) 6/10 c) 2/10 d) 1

**5.** 2, 8, 6, 12 ಮತ್ತು 'x' ಗಳ ಸರಾಸರಿ ಆದಾಗ x ನ ಬೆಲೆ

a) 10 b) 7 c) 4 d) 8

**6.** $x^2+14x+k$ ಯ ಒಂದು ಸೊನ್ನೆಯು –6 ಆದಾಗ K ಯ ಬೆಲೆ

a) 35 b) –14 c) 48 d) –48

**7.** Tan 2A = Cot(A-18) ಮತ್ತು 2A<90 ಆದಾಗ A ಯ ಬೆಲೆ

a) 72º b) 36º c) 63º d) 18º

**8.** ಒಂದು ಸರಳರೇಖೆಯ ಇಳಿಜಾರು 4, ಅದಕ್ಕೆ ಲಂಬವಾಗಿರುವ ಸರಳರೇಖೆಯ ಸಮೀಕರಣ

a) x-4y+c = 0 b) 4y=-x+c c) x+y-c = 0 d) 4x-y+c = 0

II. **6 x 1 = 6**

**9.** ಎರಡೂ ಸಂಖ್ಯೆಗಳ ಹರಾತ್ಮಕ ಮಾಧ್ಯಮ 24/5. ಅದರಲ್ಲಿ ಒಂದು ಸಂಖ್ಯೆಯು 4 ಆದಾಗ ಅದರ ಮತ್ತೊಂದು ಸಂಖ್ಯೆ ಯಾವುದು ?

**10.** $p(x)= x^3-4x^2+3x+1$ ನ್ನು $g(x) = x-1$ ರಿಂದ ಭಾಗಿಸಿದಾಗ ಅದರ ಶೇಷವನ್ನು ಕಂಡು ಹಿಡಿಯಿರಿ.

**11.** ಚೌಕದ ಸುತ್ತಳತೆ 20 ಸೆಂ. ಮೀ. ಆದಾಗ ಅದರ ಕರ್ಣದ ಉದ್ದವನ್ನು ಕಂಡು ಹಿಡಿಯಿರಿ.

**12.** 8 ಸೆಂ. ಮೀ. ಉದ್ದ ಜ್ಯಾವನ್ನು ಕೇಂದ್ರದಿಂದ 3 ಸೆಂ. ಮೀ. ದೂರದಲ್ಲಿ ಎಳೆಯಲಾಗಿದೆ. ಹಾಗಾದರೆ ವೃತ್ತದ ತ್ರಿಜ್ಯ ಕಂಡು ಹಿಡಿಯಿರಿ.

**ಪುಟ 5 ಕ್ಕೆ ➢**

➢ ಪುಟ 4 ರಿಂದ.....

**ಮಾದರಿ ಪತ್ರಿಕೆ**

**13.** $(x_1\ 4_1)$ ಮತ್ತು $(x_2\ 4_2)$ ಬಿಂದುವನ್ನು ಸೇರಿಸುವ ಸರಳ ರೇಖೆಯ ಮಧ್ಯ ಬಿಂದುವಿನ ನಿರ್ದೇಶಾಂಕ ಬರೆಯಿರಿ.

**14.** ಒಂದು ಶಂಕುವಿನ ವಕ್ರ ಮೇಲ್ಮೈ ವಿಸ್ತೀಣ 4070 $cm^2$ ಮತ್ತು ಅದರ ಪಾದದ ವ್ಯಾಸ 70 cm ಆದಾಗ ಅದರ ಓರೆ ಎತ್ತರ ಕಂಡುಹಿಡಿಯಿರಿ.

**III.** **16 x 2 = 32**

**15.** ಯಾವುದೇ ಧನ ವಾಸ್ತವ ಬೆಸ ಸಂಖ್ಯೆಯು 6q+1 ಅಥವಾ 6q+3 ಅಥವಾ 6q+5 ರೀತಿಯಲ್ಲಿ ಇರುತ್ತದೆ ಎಂದು ಸಾಧಿಸಿ.

**16.** A = {0, 1, 2, 3, 4, 5, 6, 7} B = {1, 4, 6, 8} ಆದಾಗ A/(A/B) = A1B ಎಂದು ಸಾಧಿಸಿ.

**17.** 7 ರಿಂದ ಭಾಗಿಸಲ್ಪಡುವ ಎಲ್ಲಾ 3 ಅಂಕಗಳ ಮೊತ್ತವನ್ನು ಕಂಡು ಹಿಡಿಯಿರಿ.

**18.** $9P_5 + 5.9p_4 = 10p_r$ ಆದಾಗ 'r' ನ ಬೆಲೆ ಏನು ?

**19.** ಒಂದು ಬುಟ್ಟಿಯಲ್ಲಿ 6 ಕೆಂಪು ಗುಲಾಬಿಗಳು ಹಾಗೂ ಕೆಲವು ಬಿಳಿ ಗುಲಾಬಿಗಳಿವೆ. ಅವುಗಳಲ್ಲಿ ಕೆಂಪು ಗುಲಾಬಿಗಳನ್ನು ತೆಗೆಯುವ ಸಂಭವನೀಯತೆಯು ಬಿಳಿ ಗುಲಾಬಿಗಳನ್ನು ತೆಗೆಯುವ ಸಂಭವನೀಯತೆಯ ಎರಡರಷ್ಟಿದ್ದರೆ ಅದರಲ್ಲಿರುವ ಬಿಳಿ ಗುಲಾಬಿಗಳ ಸಂಖ್ಯೆ ಕಂಡು ಹಿಡಿಯಿರಿ.

**20.** ಛೇದವನ್ನು ಅಕರಣೀಕರಿಸಿ a ಮತ್ತು b ಗಳ ಬೆಲೆ ಕಂಡು ಹಿಡಿಯಿರಿ.

$$\frac{4+\sqrt{2}}{2+\sqrt{2}} = a - \sqrt{b}$$

**21.** $(3\sqrt{18}+2\sqrt{12})$ ಮತ್ತು $(\sqrt{50} - \sqrt{27})$ ರ ಗುಣಲಬ್ಧವನ್ನು ಕಂಡುಹಿಡಿಯಿರಿ.


**22.** $(x^4+2x^3\ 2x^2+x+1)$ ಬಹುಪದೋಕ್ತಿಗೆ ಯಾವ ಸಂಖ್ಯೆಯನ್ನು ಕೂಡಿದಾಗ ದೊರಕುವ ಬಹುಪದೋಕ್ತಿ $(x^2+2x-3)$ ರಿಂದ ಸಂಪೂರ್ಣವಾಗಿ ಭಾಗಿಸಲ್ಪಡುತ್ತದೆ.

ಅಥವಾ

$P(x) = x^3 - 6x^2+15x- 8$ ನ್ನು $g(x)=(x-2)$ ರಿಂದ ಭಾಗಿಸಿದಾಗ ದೊರಕುವ ಭಾಗಲಬ್ಧ ಮತ್ತು ಶೇಷವನ್ನು ಭಾಗಾಕಾರದ ಅಲ್ಗಾರಿಥಂ ವಿಧಾನದಿಂದ ಕಂಡುಹಿಡಿಯಿರಿ.

**23.** $4x^2 - 8Px + 9 = 0$ ವರ್ಗ ಸಮೀಕರಣದ ಮೂಲಗಳ ವ್ಯತ್ಯಾಸವು 4 ಆದಾಗ P ನ ಬೆಲೆ ಏನು ?

**24.** ಚಿತ್ರದಲ್ಲಿ APZQR, AQ = 15 cm AR = 20 cm ಮತ್ತು AP=12 cm ಆದಾಗ IQAR = 90 ಎಂದು ಸಾಧಿಸಿ




**25.** $(1+\cot^2\theta)\ (1-\cos\theta)\ (1+ \cos\theta) = 1$ ಎಂದು ಸಾಧಿಸಿ.

**26.** (2,1) ಮತ್ತು (1, −2) ಬಿಂದುಗಳು (x, y) ನಿಂದ ಸಮನಾದ ದೂರದಲ್ಲಿದ್ದರೆ x+3y=0 ಎಂದು ಸಾಧಿಸಿ.

**27.** 5 ಸೆಂ.ಮೀ. ತ್ರಿಜ್ಯವಿರುವ ವೃತ್ತಕ್ಕೆ ಅದರ ಕೇಂದ್ರದಿಂದ 8 ಸೆಂಮೀ. ದೂರದಲ್ಲಿರುವ ಬಿಂದುವಿನಿಂದ ಎರಡು ಸ್ಪರ್ಶಕಗಳನ್ನು ರಚಿಸಿ.

**28.** ಎರಡು ಗೋಳಗಳ ಘನಫಲವು 64:27ರ ಅನುಪಾತದಲ್ಲಿದೆ. ಅವುಗಳ ತ್ರಿಜ್ಯಗಳ ಮೊತ್ತ 21 ಆದಾಗ, ಅವುಗಳ ತ್ರಿಜ್ಯಗಳನ್ನು ಕಂಡುಹಿಡಿಯಿರಿ.

ಅಥವಾ

ಒಂದು ಶಂಕುವಿನ ಬಿನ್ನಕದ ರೂಪದಲ್ಲಿರುವ ಪಾತ್ರೆಯ ಎತ್ತರ 16 ಸೆಂ.ಮೀ. ಹಾಗೂ ಅದರ ಮೇಲಿನ ಮತ್ತು ಕೆಳಗಿನ ಪಾದಗಳ ತ್ರಿಜ್ಯಗಳು ಕ್ರಮವಾಗಿ 8 ಸೆಂ. ಮೀ. ಮತ್ತು 20 ಸೆಂ. ಮೀ. ಆಗಿದ್ದರೆ, ಒಂದು ಲೀಟರ್‌ಗೆ ರೂ. 30 ರಂತೆ ಅದನ್ನು ಹಾಲಿನಿಂದ ತುಂಬಲು ಬೇಕಾಗುವ ಹಣವನ್ನು ಕಂಡು ಹಿಡಿಯಿರಿ.

ಪುಟ 6 ಕ್ಕೆ ➢

➢ ಪುಟ 5 ರಿಂದ.....

ಮಾದರಿ ಪತ್ರಿಕೆ

**29.** ಈ ಕೆಳಕಂಡ ಅಂಕಿಅಂಶಗಳಿಂದ ಕಚ್ಚಾ ಆಕೃತಿ ರಚಿಸಿ. ಸ್ಕೇಲ್ 10 ಮೀ. = 1 ಸೆಂ. ಮೀ.

| | D ಗೆ ಮೀಟರ್‌ಗಳಲ್ಲಿ | |
|---|---|---|
| 30 | 100 | |
| C ಗೆ 30 | 80 | |
| | 40 | E ಗೆ 50 |
| B ಗೆ 60 | 20 | |
| | A ಯಿಂದ | |

**30.** ಇವುಗಳಿಗೆ ಸೂತ್ರಗಳನ್ನು ಬರೆಯಿರಿ.

1. ಶಂಕುವಿನ ಭಿನ್ನಕದ ಘನಫಲ
2. ಸಿಲೆಂಡರ್ ಪೂರ್ಣ ಮೇಲ್ಮೈ ವಿಸ್ತೀರ್ಣ
3. ಅರ್ಧಗೋಳದ ಪೂರ್ಣ ಮೇಲ್ಮೈ ವಿಸ್ತೀರ್ಣ
4. ಶಂಕುವಿನ ಇಳಿಜಾರನ್ನು ಕಂಡುಹಿಡಿಯುವುದು

**IV.** **6 x 3 = 18**

**31.** ಕ್ರಿಕೆಟ್ ಕ್ಲಬ್ ಒಂದರಲ್ಲಿ 6 ಜನ ಬೌಲರ್ ಮತ್ತು 9 ಜನ ಬ್ಯಾಟ್ಸ್‌ಮನ್‌ಗಳಿದ್ದಾರೆ. ಕನಿಷ್ಟ 4 ಬೌಲರ್‌ಗಳಿರುವಂತೆ 11 ಜನರ ಎಷ್ಟು ತಂಡಗಳನ್ನು ಆಯ್ಕೆ ಮಾಡಬಹುದು ?

ಅಥವಾ

16. $nP_3 = 13\ (n+1)P_3$ ಆದಾಗ 'n' ಬೆಲೆ ಏನು ?

**32.** ಶಾಲಾ ಪ್ರವಾಸಕ್ಕೆ ಹೋಗಲು ವಿವಿಧ ಸ್ಥಳಗಳನ್ನು ಆಯ್ಕೆ ಮಾಡಿರುವ ಬಗ್ಗೆ ಸಮೀಕ್ಷೆಯ ವಿವರಗಳನ್ನು ನೀಡಲಾಗಿದೆ. ಇದರ ಪೈ ನಕ್ಷೆ ರಚಿಸಿ.

| ಸ್ಥಳಗಳು | ಮೈಸೂರು | ಮಂಗಳೂರು | ಜೋಗಫಾಲ್ಸ್ | ಬಿಜಾಪುರ |
|---|---|---|---|---|
| ವಿದ್ಯಾರ್ಥಿಗಳ ಸಂಖ್ಯೆ | 14 | 10 | 12 | 4 |

**33.** ಪ್ರವಾಸಿಗನೊಬ್ಬನು ತನ್ನ ಪ್ರವಾಸಕ್ಕೆಂದು ರೂ. 3600ಗಳನ್ನು ಹೊಂದಿರುತ್ತಾನೆ. ಅವನು ತನ್ನ ಪ್ರವಾಸದ ದಿನಗಳನ್ನು 4 ದಿನ ಮುಂದೂಡಿದರೆ ಅವನು ತನ್ನ ದೈನಂದಿನ ವೆಚ್ಚವನ್ನು ಪ್ರತಿದಿನ ರೂ. 30 ರಂತೆ ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ. ಹಾಗಾದರೆ ಅವನ ಪ್ರವಾಸದ ದಿನಕ್ಕೆ ಸಂಖ್ಯೆಯನ್ನು ಕಂಡುಹಿಡಿಯಿರಿ.

ಅಥವಾ

ಒಬ್ಬ ತಂದೆಯ ವಯಸ್ಸು ತನ್ನ ಮಗನ ವಯಸ್ಸಿನ ವರ್ಗದ ಎರಡರಷ್ಟಿದೆ. 8 ವರ್ಷಗಳಾದ ಮೇಲೆ ಆತನ ವಯಸ್ಸು ಅವನ ಮಗನ ವಯಸ್ಸಿನ 3 ರಷ್ಟಕ್ಕಿಂತ 4 ವರ್ಷಗಳು ಹೆಚ್ಚಾಗುತ್ತದೆ. ಹಾಗಾದರೆ ಅವರುಗಳ ಈಗಿನ ವಯಸ್ಸನ್ನು ಕಂಡು ಹಿಡಿಯಿರಿ.

**34.** ಎರಡು ವೃತ್ತಗಳು ಪರಸ್ಪರ ಬಾಹು ಸ್ಪರ್ಶವಾದಾಗ ಅವುಗಳ ಕೇಂದ್ರಗಳು ಹಾಗೂ ಸ್ಪರ್ಶ ಬಿಂದುಗಳು ಸರಳ ರೇಖಾಗತವಾಗಿರುತ್ತದೆ ಎಂದು ಸಾಧಿಸಿ.

**35.** ನದಿಯ ಪಕ್ಕದಲ್ಲಿ ನಿಂತಿರುವ ಮನುಷ್ಯನೊಬ್ಬನು ಅವನಿಗೆ ಅಭಿಮುಖದಲ್ಲಿರುವ ಆ ನದಿಯ ಆಚೆಯ ದಂಡೆಯಲ್ಲಿರುವ ಮರದ ತುದಿಯನ್ನು ಗಮನಿಸಿದಾಗ ಉಂಟಾಗುವ ಕೋನವು 60º ಆಗಿರುತ್ತದೆ. ಅವನು ಅಲ್ಲಿಂದ 20 ಮೀಟರ್ ಹಿಂದಕ್ಕೆ ಹೋಗಿ ಗಮನಿಸಿದಾಗ ಉಂಟಾಗುವ ಉನ್ನತ ಕೋನವು 30º ಯಾಗಿದ್ದರೆ ಮರದ ಎತ್ತರ ಹಾಗೂ ನದಿಯ ಅಗಲವನ್ನು ಕಂಡು ಹಿಡಿಯಿರಿ.

ಪುಟ 7 ಕ್ಕೆ ➢

➢ ಪುಟ 6 ರಿಂದ.....

ಮಾದರಿ ಪತ್ರಿಕೆ

ಅಥವಾ

$\frac{\cos^2\theta + \tan^2\theta - 1}{\sin^2\theta} = \tan^2\theta$ ಎಂದು ತೋರಿಸಿ.

**36.** $\Delta ABC$ ಯು ಸಮ ತ್ರಿಬಾಹು ತ್ರಿಭುಜ $AD \perp BC$ ಆದಾಗ $AD^2 = 3BD^2$ ಎಂದು ಸಾಧಿಸಿ.

ಅಥವಾ

$\Delta ABC$ ಯಲ್ಲಿ $\Delta B=90^o$, $BD + AC$, $AB=C$, $BC=a$, $BD=P$ ಮತ್ತು $AC=b$ ಆದಾಗ $1/a^2 + 1/c^2 = 1/p^2$ ಎಂದು ಸಾಧಿಸಿ.

**V.** **4 X 4 = 16**

**37.** $x^2+2x-3 = 0$ ವರ್ಗ ಸಮೀಕರಣವನ್ನು ನಕ್ಷೆಯ ಸಹಾಯದಿಂದ ಬಿಡಿಸಿ.

**38.** ಕೇಂದ್ರಗಳ ನಡುವೆ 10 ಸೆಂ. ಮೀ. ಇರುವಂತೆ 5 ಸೆಂ.ಮೀ ಮತ್ತು 3 ಸೆಂ.ಮೀ. ತ್ರಿಜ್ಯಗಳುಳ್ಳ ಎರಡು ವೃತ್ತಗಳಿಗೆ ಎರಡು ನೇರ ಸಾಮಾನ್ಯ ಸ್ಪರ್ಶಕಗಳನ್ನು ರಚಿಸಿ.

**39.** ಒಂದು ಸಮಾಂತರ ಶ್ರೇಣಿಯಲ್ಲಿ $S_5+S_7=167$ ಮತ್ತು $S_{10} = 235$ ಆದಾಗ ಶ್ರೇಢಿಯನ್ನು ಕಂಡು ಹಿಡಿಯಿರಿ.

ಅಥವಾ

ಗುಣೋತ್ತರ ಶ್ರೇಢಿಯ 7ನೇ ಪದವು ಅದರ 4ನೇ ಪದದ 8ರಷ್ಟಿದೆ. ಮತ್ತು 5ನೇ ಪದ 12 ಆಗಿದ್ದರೆ ಗುಣೋತ್ತರ ಶ್ರೇಢಿಯನ್ನು ಬರೆಯಿರಿ.

**40.** ಒಂದು ಲಂಬ ಕೋನ ತ್ರಿಭುಜದಲ್ಲಿ ಲಂಬಕೋನದಿಂದ ವಿಕರ್ಣಕ್ಕೆ ಎಳೆದ ಲಂಬವು ತ್ರಿಭುಜವನ್ನು ಎರಡು ಸಮರೂಪೀಯ ತ್ರಿಭುಜಗಳಾಗಿ ವಿಭಾಗಿಸಿ ಅವುಗಳು ದತ್ತ ತ್ರಿಭುಜಕ್ಕೆ ಸಮರೂಪೀಯವಾಗಿರುತ್ತದೆ ಎಂದು ಸಾಧಿಸಿ.

**ಎಸ್. ಕೆ. ವರದರಾಜ್,** ನಿವೃತ್ತ ಶಿಕ್ಷಕರು, ನ್ಯಾಷನಲ್ ಪ್ರೌಢಶಾಲೆ

## ಕಷ್ಟಕ್ಕೆ ದನಿಯಾದ ಸಂಘ

ಕರ್ನಾಟಕದಲ್ಲಿದೆ ಬೆಳ್ಳಿ ಚುಕ್ಕಿ ಮಾಧ್ಯಮಿಕ ಶಿಕ್ಷಕರ ಸಂಘ
ಇದು ಎಂದೂ ಬೇರೆಯವರ ಕೆಲಸಕ್ಕೆ ಮಾಡಿಲ್ಲ ಭಂಗ
ದುಡಿಯುತ್ತಾರೆ ಪದಾಧಿಕಾರಿಗಳು ಸಂಘಕ್ಕಾಗಿ ಮರೆತು ಭೋಗ
ಮಂಗನಂತೆ ಆಡುವವರಿಗೆ ಸಂಘದಲ್ಲಿ ನೀಡುವುದಿಲ್ಲ ಜಾಗ
ತಪ್ಪು ಮಾಡಿದ ಅಧಿಕಾರಿಗಳಿಗೆ ಸಂಘ ಬಾರಿಸುತ್ತೆ ಮೃದಂಗ
ಕರ್ನಾಟಕದ ತುಂಬೆಲ್ಲ ತುಂಬಿದೆ ಸಂಘದ ತರಂಗ
ಈ ಸಂಘಕ್ಕೆ ಒಂದು ಇದೆ ಅದೇ ಯಾಕುಂದೇಂದು ಅನ್ನೋ ರಾಗ
ಇದನ್ನ ಕಟ್ಟಿ ಬೆಳೆಸಲು ಹಿರಿಯರು ಮಾಡಿದ್ದಾರೆ ಮಹಾಯಾಗ
ನ್ಯಾಯ ನೀತಿ ನಾಡ ರಕ್ಷಣೆಗೆ ಸಂಘದವರು ಮಾಡುತ್ತಾರೆ ಕಾಳಗ
ಒಟ್ಟಿನಲ್ಲಿ ಮಾಧ್ಯಮಿಕ ಶಿಕ್ಷಕ ಸಂಘ
ನಕ್ಷತ್ರದಂತೆ ಹೊಳೆಯುವ, ಸೂರ್ಯನಂತೆ ಪ್ರಜ್ವಲಿಸುವ
ಚಂದ್ರನಂತೆ ತಂಪೆರೆಯುವ ತಣ್ಣನೆ ರಾಗ
ಹರಡಲಿ ಮಲ್ಲಿಗೆ ಹೂವಿನಂತ ಪರಿಮಳ ಬಹುಬೇಗ
ನಾಡಿಗೆ ಮಾದರಿಯಾಗಿದೆ ಸಂಘದ ಪದಾಧಿಕಾರಿಗಳು ಮಾಡಿದ ಕಾರ್ಯದ ತ್ಯಾಗ
ತರಲಿ ತರಲಿ ಬೆಳಗಲಿ ಬೆಳಗಲಿ ಉಳಿಸಲಿ ಉಳಿಸಲಿ
ಬೆಳಸಲಿ ಬೆಳಸಲಿ ಈ ಸಂಘ ಜನರಲ್ಲಿ ಮರೆಯಲಾರದ ನಗುಮೊಗ
ನಿಮ್ಮ ಕಷ್ಟಕ್ಕೆ ದನಿಯಾಗಿ ನಮ್ಮ ಸಂಘ ನಿಮ್ಮ ಇಷ್ಟಕ್ಕೆ ಇಷ್ಟವಾಗಿ
ಕೈ ಹಿಡಿದು ನಡೆಸುವವರು ಯಾರು ಅಂದುಕೊಂಡಿದ್ದೀರ
ನಮ್ಮ ಮಾಧ್ಯಮಿಕ ಶಿಕ್ಷಕ ಸಂಘ ಕಣಯ್ಯ

ರಚನೆ: ಲಿಂಗರಾಜು ಎ.,
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆ

## ವಿದ್ಯಾರ್ಥಿ ಮಿತ್ರ
## 22 ರ ಉತ್ತರ

**ಪದಬಂಧ :**

ಎಡದಿಂದ ಬಲಕ್ಕೆ

1. ವಿಧಾನಸೌಧ ; 5. ಕನಕ ;
7. ಶುಭಕರ ; 9 ವಿನಾಯಕ ;
11. ಕವಾಡಿಗ ; 14. ಹರತಾಳ
16. ರಮಣ ; 18. ಬಯಲುದಾರಿ

ಮೇಲಿನಿಂದ ಕೆಳಕ್ಕೆ

2. ನರ್ತನ ; 3. ಕೌಸ್ತುಭ
4. ಹರಯ ; 5. ಕರ
6. ಕವಿ ; 8. ಕರಡಿ
10. ನಾಗರ ; 12. ವಾಹಕ
13. ಗರ ; 14. ಹಣ
15. ತಾವರೆ ; 17. ಮಹಲು

# ಮಾದರಿ ಪ್ರಶ್ನೆ ಪತ್ರಿಕೆ : ಸಮಾಜ ವಿಜ್ಞಾನ

**ಸಮಯ: 2 ಗಂಟೆ 30 ನಿಮಿಷ** **ಗರಿಷ್ಠ ಅಂಕಗಳು : 80**

**I. ಕೆಳಗಿನ ಬಹು ಆಯ್ಕೆ ಪ್ರಶ್ನೆಯ ಹೇಳಿಕೆಗಳಿಗೆ ನಾಲ್ಕು ಪರ್ಯಾಯಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಂಕವನ್ನು ಮತ್ತು ಉತ್ತರವನ್ನು ಕೊಟ್ಟಿರುವ ಚುಕ್ಕೆಗೆರೆ ಸ್ಥಳದಲ್ಲಿಯೇ ಕಡ್ಡಾಯವಾಗಿ ಬರೆಯಿರಿ. 10x1=10**

**1.** ಸರಿಯಾದ ಉತ್ತರವನ್ನು ಗುರುತಿಸಿ.

| | |
|---|---|
| ಎ) ನಿಕೊಲಸ್ II | i) ಲೆನಿನ್ |
| ಬಿ) ಫ್ಯೂಹರೆರ್ | ii) ಮಾವೊ ತ್ಸೆ ತುಂಗ |
| ಸಿ) ಕಪ್ಪಂಗಿದಳ | iii) ರಷ್ಯಾದ ಕೊನೆಯ ಜಾರ್ |
| ಡಿ) ಇಟಲಿಯ ಸರ್ವಾಧಿಕಾರಿ | iv) ಜರ್ಮನಿಯಲ್ಲಿ ಸ್ಥಾಪನೆಯಾದ ಖಾಸಗಿ ಸೇನೆ |

ಉತ್ತರ ........................................................

**2.** ಶುದ್ಧೀಕರಣ ಚಳವಳಿ ಈ ಸಂಘಟನೆಯ ಪ್ರಮುಖ ಚಟುವಟಿಕೆ.

ಎ) ಬ್ರಹ್ಮ ಸಮಾಜ ಬಿ) ಆರ್ಯ ಸಮಾಜ ಸಿ) ಪ್ರಾರ್ಥನಾ ಸಮಾಜ ಡಿ) ಸತ್ಯಶೋಧಕ ಸಮಾಜ

ಉತ್ತರ ........................................................

**3.** ಭಾರತದ ವಿದೇಶಾಂಗ ನೀತಿ ಈ ನೀತಿಯನ್ನು ವಿರೋಧಿಸಿದೆ.

ಎ) ವರ್ಣಭೇದ ನೀತಿ ಬಿ) ಪರಸ್ಪರ ಸಹಬಾಳ್ವೆ ನೀತಿ ಸಿ) ನಿಶ್ಶಸ್ತ್ರೀಕರಣ ನೀತಿ ಡಿ) ಅಲಿಪ್ತ ನೀತಿ

ಉತ್ತರ ........................................................

**4.** ಈ ಕೆಳಗಿನ ಯಾವ ಹುದ್ದೆ ಅಥವಾ ಸೌಲಭ್ಯಕ್ಕಾಗಿ ಭಾರತ ವಿಶೇಷವಾಗಿ ಪ್ರಯತ್ನಿಸುತ್ತಿದೆ?

ಎ) ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಹುದ್ದೆ. ಬಿ) ವಿಶ್ವ ಬ್ಯಾಂಕ್‌ನ ಮುಖ್ಯಸ್ಥರ ಹುದ್ದೆ.

ಸಿ) ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರದ ಅವಕಾಶ. ಡಿ) ಸಾರ್ಕ್ ಸದಸ್ಯತ್ವ.

ಉತ್ತರ ........................................................

**5.** ಅಸ್ಪೃಶ್ಯತಾ ಆಚರಣೆ ಕಡಮೆಯಾಗುತ್ತಿರಲು ಮುಖ್ಯ ಕಾರಣ

ಎ) ಅನಕ್ಷರಸ್ಥರ ಸಂಖ್ಯೆಯಲ್ಲಿ ಹೆಚ್ಚಳ ಬಿ) ನಿರುದ್ಯೋಗಿಗಳ ಸಂಖ್ಯೆಯಲ್ಲಿ ಇಳಿತ.

ಸಿ) ಭಾರತ ರೂಢಿಸಿಕೊಂಡಿರುವ ವಿದೇಶಾಂಗ ನೀತಿ ಡಿ) ಅಕ್ಷರತೆಯ ಪ್ರಮಾಣ ಹೆಚ್ಚುತ್ತಿರುವ ಅಂಶ.

ಉತ್ತರ ........................................................

**6.** ವಿವಿಧೋದ್ದೇಶ ನೀರಾವರಿ ಯೋಜನೆಗಳ ನಿರ್ಮಾಣದ ಪ್ರಮುಖ ಉದ್ದೇಶ:

ಎ) ವಿದ್ಯುತ್ ಉತ್ಪಾದನೆ ಬಿ) ಮೀನುಗಾರಿಕೆಗೆ ಪ್ರೋತ್ಸಾಹ

ಸಿ) ನೀರಿನ ಗರಿಷ್ಠ ಪ್ರಮಾಣದ ಬಳಕೆ. ಡಿ) ಪ್ರವಾಹ ನಿಯಂತ್ರಣ

ಉತ್ತರ ........................................................

**7.** ಬೇಸಗೆಯಲ್ಲಿ ರಾಜಾಸ್ಥಾನದ ಗಂಗಾ ನಗರ 52ಡಿಗ್ರಿ ಸೆಂಟಿಗ್ರೇಡ್ ಗರಿಷ್ಠ ಪ್ರಮಾಣದ ಉಷ್ಣಾಂಶವನ್ನು ದಾಖಲಿಸುತ್ತದೆ. ಆದರೆ ಅದೇ ಸಮಯದಲ್ಲಿ ದಕ್ಷಿಣ ಭಾರತದಲ್ಲಿ ಉಷ್ಣಾಂಶ ಸಾಧಾರಣ ಮಾತ್ರವೆನಿಸುವ 32ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಇದಕ್ಕೆ ಕಾರಣ

ಎ) ದಕ್ಷಿಣಭಾರತ ಸಮುದ್ರದಿಂದ ದೂರವಿದೆ.

ಬಿ) ದಕ್ಷಿಣಭಾರತ ಮೂರು ಕಡೆಗಳಿಂದ ಸಮುದ್ರದಿಂದ ಆವರಿಸಿದೆ.

ಸಿ) ದಕ್ಷಿಣಭಾರತ ಕಾಡುಗಳಿಂದ ತುಂಬಿದೆ.

ಡಿ) ದಕ್ಷಿಣಭಾರತ ಹಿಮಾಲಯ ಪರ್ವತಗಳ ತಪ್ಪಲಲ್ಲಿದೆ.

ಉತ್ತರ ........................................................

ಪುಟ 9 ಕ್ಕೆ ➤

➢ ಪುಟ 8 ರಿಂದ.....

ಮಾದರಿ ಪತ್ರಿಕೆ

8. ಕೆಳಗಿನ ಯಾವುದು ಪರೋಕ್ಷ ತೆರಿಗೆಯ ಗುಂಪಿಗೆ ಸೇರಿಲ್ಲ?
ಎ) ಆಮದು–ರಫ್ತು ತೆರಿಗೆ. ಬಿ) ಸೇವಾ ತೆರಿಗೆ. ಸಿ) ಕೇಂದ್ರ ಅಬಕಾರಿ ತೆರಿಗೆ. ಡಿ) ಸಂಪತ್ತು ತೆರಿಗೆ.
ಉತ್ತರ ........................................................

9. ಸಾಮಾನ್ಯವಾಗಿ ಈ ಖಾತೆಯನ್ನು ಹೊಂದಿರುವವರು ಬಡ್ಡಿಯ ಹಣವನ್ನು ಪಡೆಯುವುದಿಲ್ಲ.
ಎ) ಚಾಲ್ತಿ ಖಾತೆ. ಬಿ) ಆವರ್ತ ಠೇವಣಿ ಖಾತೆ. ಸಿ) ನಿಶ್ಚಿತ ಠೇವಣಿಖಾತೆ. ಡಿ) ಉಳಿತಾಯ ಖಾತೆ.
ಉತ್ತರ ........................................................

10. ಡಾ॥ ಪ್ರತಾಪ್ ರೆಡ್ಡಿಯವರ ವಿಶಿಷ್ಟ ಸಾಧನೆ
ಎ) ಬೃಹತ್ ಉದ್ಯಮವನ್ನು ಸ್ಥಾಪಿಸಿದುದು.
ಬಿ) ಭಾರತದ ಸಾಮಾನ್ಯ ಜನತೆಗೆ ದುಬಾರಿಯಾಗದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದುದು.
ಸಿ) ವಿದೇಶದಲ್ಲಿ ಉನ್ನತ ವೈದ್ಯ ಶಿಕ್ಷಣ ಪಡೆದುದು.
ಡಿ) ಜೆಟ್ ವಾಯು ಸಂಸ್ಥೆಯನ್ನು ಸ್ಥಾಪಿಸಿದುದು.
ಉತ್ತರ ........................................................

**II. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :** **14 x 1 = 14**

11. ಜನಪದ ಚರಿತ್ರೆ ಎಂದರೇನು?
12. ಬಸ್ಸಿನ್ ಒಪ್ಪಂದದ ಪರಿಣಾಮವೇನು?
13. ಜ್ಯೋತಿಭಾ ಪುಲೆಯವರ ಪ್ರಮುಖ ಪ್ರತಿಪಾದನೆಯನ್ನು ತಿಳಿಸಿ.
14. ಭಾರತದ ಸಂವಿಧಾನದ ಪ್ರಸ್ತಾವನೆಯಾದ "ಭಾರತದ ಪ್ರಜೆಗಳಾದ ನಾವು"... ಈ ಒಕ್ಕಣೆ ಏನನ್ನು ಬಿಂಬಿಸುತ್ತದೆ?
15. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಪ್ರಮುಖ ಸಂಸ್ಥೆಗಳನ್ನು ಹೆಸರಿಸಿ.
16. ಹೆಣ್ಣು ಭ್ರೂಣ ಹತ್ಯೆಯ ಒಂದು ದುಷ್ಪರಿಣಾಮವನ್ನು ತಿಳಿಸಿ.
17. 'ಕೂಲಿಯಿಂದ ಶಾಲೆಗೆ' ಎಂಬ ಕಾರ್ಯಕ್ರಮದ ಉದ್ದೇಶವೇನು?
18. ರಬಿ ಬೇಸಾಯ ಎಂದರೇನು?
19. ಸಾಂದ್ರ ಬೇಸಾಯ ಎಂದರೇನು?
20. ಕಲ್ಲಿದ್ದಲನ್ನು ಬಳಸುವ ಪ್ರಮುಖ ಉದ್ದಿಮೆಗಳನ್ನು ಹೆಸರಿಸಿ.
21. ಕಾಗದ ತಯಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳಾವುವು?
22. ಆರ್ಥಿಕ ಅಭಿವೃದ್ಧಿಯ ಮುಖ್ಯ ಗುರಿ ಏನು?
23. ದೇಶದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಲು ಅಗತ್ಯವಿರುವ ಎರಡು ಅಂಶಗಳಾವುವು?
24. ಡಾ॥ ನಾರ್ಮನ್ ಬೋರ್ಲಾಗ್ ಇವರ ಕೊಡುಗೆಯನ್ನು ತಿಳಿಸಿ.

**III. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **15x2=30**

25. ವಾಂಡಿವಾಷ್ ಯುದ್ಧ ಯಾರು ಯಾರಿಗೆ ನಡೆಯಿತು? ಇದರ ಪರಿಣಾಮಗಳೇನು?

ಅಥವಾ

ದ್ವಿ ಸರ್ಕಾರ ಎಂದರೇನು? ಇದನ್ನು ಬಂಗಾಳದಲ್ಲಿ ಯಾರು ಜಾರಿಗೆ ತಂದರು?

26. ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಕರ್ನಾಟಕ ಇತಿಹಾಸದ ಒಂದು ಮುಖ್ಯ ಅಧ್ಯಾಯ. ಈ ವಂಶದ ನಾಲ್ವರು ಪ್ರಮುಖ ಅರಸರನ್ನು ಹೆಸರಿಸಿ.
27. ಜುನಾಗಢ ಸಮಸ್ಯೆಯನ್ನು ತಿಳಿಸಿ.
28. ಶೀತಲ ಸಮರ ಎಂದರೇನು? ಇದರ ಪ್ರಮುಖವಾದ ಪರಿಣಾಮವೇನು?
29. ಪ್ರಾದೇಶಿಕ ವಾದವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಪುಟ 10 ಕ್ಕೆ ➢

➢ ಪುಟ 9 ರಿಂದ.....

**ಮಾದರಿ ಪತ್ರಿಕೆ**

**30**. ಭಯೋತ್ಪಾದಕತೆಯ ಪರಿಣಾಮಗಳೇನು?

**31**. ನರ್ಮದಾ ಚಳುವಳಿಯ ಉದ್ದೇಶವೇನು?

**32**. ವಲಸೆಯ ಕಾರಣಗಳೇನು?

**33**. ಉತ್ತರ ಭಾರತದ ಮೈದಾನ ಹೇಗೆ ನಿರ್ಮಾಣವಾಗಿದೆ? ಇಲ್ಲಿನ ಮುಖ್ಯ ಆರ್ಥಿಕ ಚಟುವಟಿಕೆ ಯಾವುದು?

**34**. ಪರ್ವತ ಮಣ್ಣು ಯಾವ ಅಂಶವನ್ನು ಅಧಿಕವಾಗಿ ಹೊಂದಿದೆ? ಈ ಮಣ್ಣು ಯಾವ ಪ್ರದೇಶಗಳಲ್ಲಿ ಹಂಚಲ್ಪಟ್ಟಿದೆ?

**35**. ಮ್ಯಾಂಗ್ರೂವ್ ಅರಣ್ಯಗಳು ಹೇಗೆ ಉಂಟಾಗಿದೆ? ಇವು ಎಲ್ಲಿ ಕಂಡು ಬರುತ್ತವೆ?

**36**. ಜಿ.ಡಿ.ಎಸ್. ವ್ಯವಸ್ಥೆಯ ಉಪಯೋಗಗಳೇನು?

**37**. ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಉಂಟಾಗಲು ಕಾರಣವೇನು?

**38**. ಆರ್ಥಿಕ ಏರಿಳಿತ ಮತ್ತು ಆರ್ಥಿಕ ಸ್ಥಿರತೆ ಎಂದರೇನು?

**39**. ಅಂತಾರಾಷ್ಟ್ರೀಯ ಹಣಕಾಸು ನಿಧಿ ಜಾಗತೀಕರಣವನ್ನು ಹೇಗೆ ವ್ಯಾಖ್ಯಾನಿಸಿದೆ?

**IV. ಈ ಪ್ರಶ್ನೆಗಳಿಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **6x3=**18

**40**. 1857ರ ಭಾರತದ ಮೊದಲ ಸ್ವಾತಂತ್ರ್ಯ ಸಮರದ ಪರಿಣಾಮಗಳೇನು?

ಅಥವಾ

ಇಂಗ್ಲೆಂಡ್‌ನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿ ಭಾರತದ ಕೈಗಾರಿಕೆಗಳ ಮೇಲೆ ಯಾವ ಪರಿಣಾಮಗಳನ್ನು ಬೀರಿತು?

**41**. ಪಂಚಶೀಲತತ್ವಗಳನ್ನು ನಿರೂಪಿಸಿ.

ಅಥವಾ

ಭಾರತ ಮತ್ತು ಚೀನಾ ನಡುವೆ ವಿಷಮ ಸಂಬಂಧಗಳು ಉಂಟಾಗಲು ಕಾರಣಗಳೇನು?

**42**. ಅಸ್ಪೃಶ್ಯತಾ ನಿವಾರಣೆಗೆ ಕೈಗೊಂಡಿರುವ ಕ್ರಮಗಳಾವುವು?

ಅಥವಾ

ಕೂಲಿ ಸಹಿತ ಮತ್ತು ಕೂಲಿರಹಿತ ದುಡಿಮೆ ಎಂದರೇನು? ಇವುಗಳಿಗಿರುವ ವ್ಯತ್ಯಾಸಗಳೇನು?

**43**. ರಸ್ತೆ ಸಾರಿಗೆಯನ್ನು ಹೇಗೆ ವರ್ಗೀಕರಿಸಲಾಗಿದೆ? ಈ ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.

ಅಥವಾ

ಭಾರತದ ಕೈಗಾರಿಕಾ ವಲಯಗಳನ್ನು ಹೆಸರಿಸಿ.

**44**. ವಿಕೇಂದ್ರೀಕರಣ ಮತ್ತು ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ವಿವರಿಸಿ.

ಅಥವಾ

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

**45**. ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು? ವಿವರಿಸಿ.

ಅಥವಾ

ವಿಮಾಪಾಲಿಸಿಯನ್ನು ತೆಗೆದುಕೊಳ್ಳಲು ಅನುಸರಿಸಬೇಕಾದ ವಿಧಾನಗಳಾವುವು?

**V. ಈ ಪ್ರಶ್ನೆಗಳಿಗೆ 8 ರಿಂದ 10 ವಾಕ್ಯಗಳಲ್ಲಿ ಉತ್ತರಿಸಿ.** **4 x 1 = 4**


**46**. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸುಭಾಷ್‌ಚಂದ್ರ ಬೋಸ್ ವಹಿಸಿದ ಪಾತ್ರವನ್ನು ವಿವರಿಸಿ.

**47**. ಭಾರತದ ನಕ್ಷೆಯನ್ನು ಬಿಡಿಸಿ ಇವನ್ನು ಗುರುತಿಸಿ. **1 + 3 = 4**

ಎ) 82.5 ಡಿಗ್ರಿ ಪೂರ್ವ ರೇಖಾಂಶ ಬಿ) ಮಂಗಳೂರು ಸಿ) ಪರದೀಪ

~ 0 ~

**– ಶ್ರೀ ಎಲ್. ಸತ್ಯನಾರಾಯಣರಾವ್**
**ನಿವೃತ್ತ ಮುಖ್ಯ ಶಿಕ್ಷಕರು, ಎನ್.ಎಸ್.ವಿ.ಕೆ. ಪ್ರೌಢಶಾಲೆ, ಬೆಂಗಳೂರು**



**ಅರುಣ ಶಹಾಪೂರ MLC**
ಕಾರ್ಯಾಧ್ಯಕ್ಷರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

ನಮ್ಮೆಲ್ಲ ಶಿಕ್ಷಕ ಬಂಧುಗಳಿಗೂ

# ಮಹಾಶಿವರಾತ್ರಿ

ಶುಭಕಾಮನೆಗಳು

ಸಮರ್ಥ ಪ್ರತಿನಿಧಿಗಳಿಂದ
ಶೇಕಡಾ 100 ಮತದಾನ ಆದಾಗ ಯಶಸ್ಸು.
ಸಮರ್ಥ ಪ್ರತಿನಿಧಿಗಳ ಆಯ್ಕೆ
ನಮ್ಮೆಲ್ಲರ ಜವಾಬ್ದಾರಿ.
ಶಿಕ್ಷಕರಾದ ನಾವೆಲ್ಲ ಕಡ್ಡಾಯವಾಗಿ
ಮತ ಚಲಾಯಿಸೋಣ.

ಜಾಹೀರಾತು

# ಸೂರ್ಯನಾಥ – ನಾನು ಕಂಡಂತೆ

ಕಳೆದ ಸಂಚಿಕೆಯಿಂದ....

■ ಚಂದ್ರಶೇಖರ ಭಂಡಾರಿ

ಅಲ್ಲೊಂದು ಇಲ್ಲೊಂದು ತಾಲೂಕು ಕೇಂದ್ರಗಳಲ್ಲಿ ಮಾತ್ರ ಓಯೆಸಿಸ್ ತರದಲ್ಲಿ ಕೆಲವು ಶಾಖೆಗಳಿದ್ದವು. ಆಗ ಸಂಘದ ಪ್ರಾಂತ ಪ್ರಚಾರಕರಾಗಿದ್ದ ಶ್ರೀ ಯಾದವರಾವ್ ಜೋಶಿ ಅವರು ಬೆಳಗಾವಿ ಜಿಲ್ಲೆಯ ಅಂದಿನ ಕಾರ್ಯಕರ್ತರ ಮಾನಸಿಕತೆಯನ್ನು 'ಧಸ್ಕಾ ಪೀಡಿತ' ('ಶಾಕ್' ತಗಲಿದ) ಸ್ಥಿತಿ ಎನ್ನುತ್ತಿದ್ದರು. ಇಂತಹ ಕ್ಷೇತ್ರದಲ್ಲಿ ಕೆಲಸವನ್ನು ಚಿಗುರಿಸುವುದು ಸುಲಭವಾಗಿರಲಿಲ್ಲ. ಸೂರ್ಯನಾಥರು ಎರಡು ವರ್ಷಗಳ ಕಾಲ ತಮ್ಮ ರಕ್ತವನ್ನು ಬೆವರು ಮಾಡಿದ್ದ ಕ್ಷೇತ್ರ ಇಂತಹದಾಗಿತ್ತು. ಅಂತಹ ಪ್ರದೇಶದಲ್ಲಿ ಕಾರ್ಯೋತ್ಸಾಹ ತುಂಬುವುದೇ ಆಗ ಅವರ ಮುಂದಿದ್ದ ಬಹುದೊಡ್ಡ ಸವಾಲು. ಅವರದನ್ನು ತಮ್ಮ ಮಾತು, ರೀತಿ, ಸಹವಾಸಗಳಿಂದ ಯಶಸ್ವಿಯಾಗಿ ನಿಭಾಯಿಸಿದ್ದರು.

ಪ್ರಚಾರಕ ಜೀವನದಿಂದ ನಿವೃತ್ತಿಯ ನಂತರ ಹೆಚ್ಚಿನ ಅಧ್ಯಯನಕ್ಕಾಗಿ ಸೂರ್ಯನಾಥರು ಮುಂಬಯಿಗೆ ಹೋದುದು ಪ್ರಾಯಶ: 1962ರಲ್ಲಿ. ಮುಂದಿನ 2–3 ವರ್ಷಗಳ ಕಾಲ ಮುಂಬಯಿಯಲ್ಲಿದ್ದಾಗಲೂ ಅವರದು ನಿರಂತರ ಚಟುವಟಿಕೆಯ ದಿನಚರಿ. ಇತಿಹಾಸದ ಪಿಎಚ್.ಡಿ.ಗಾಗಿ ಅಧ್ಯಯನವಂತೂ ಅವರು ತಮಗಾಗಿ ಮೊದಲೇ ಆಯ್ಕೆ ಮಾಡಿಕೊಂಡಿದ್ದ ಕೆಲಸ. ಜತೆಯಲ್ಲಿ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯ ಸಂಪಾದಕೀಯ ಮಂಡಲಿಯಲ್ಲಿ ದುಡಿಮೆ ಮತ್ತು ಉಳಿದ ಸಮಯದಲ್ಲಿ ಸಂಘದ ಕೆಲಸದಲ್ಲಿ ಸಕ್ರಿಯ ತತ್ಪರತೆ – ಇದು ಅವರ ಹೆಚ್ಚಿನ ಕೆಲಸಗಳು. ಅವರು ಬೆಂಗಳೂರಿಗೆ ಬಂದುದು ಇತಿಹಾಸದಲ್ಲಿ ಡಾಕ್ಟರೇಟ್ ಗಳಿಸಿ 1965ರ ಹೊತ್ತಿಗೆ. ಇಲ್ಲಿ ರಾಷ್ಟ್ರೋತ್ಥಾನ ಪರಿಷತ್ತು ಆಗ ತಾನೇ ಆರಂಭವಾಗಿದ್ದು ಅದರ ಬಹುಮುಖ ಚಟುವಟಿಕೆಗಳಲ್ಲಿ ಮೊದಲನೆಯದಾದ 'ಉತ್ಥಾನ' ಮಾಸಪತ್ರಿಕೆಗೆ ಸೂರ್ಯನಾಥರೇ ಪ್ರಪ್ರಥಮ ಸಂಪಾದಕರಾದರು. ಮುಂದೆ ಕೆಲಕಾಲ ಪ್ರಜಾವಾಣಿ ಪತ್ರಿಕೆಯಲ್ಲಿ ಸೇವೆ, ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಭಾಗದ ಪ್ರಾಚಾರ್ಯರಾದುದು, ಮುಂದೆ ಕೆಲವು ವರ್ಷಗಳ ಕಾಲ ಕರ್ನಾಟಕ ಗ್ಯಾಜೆಟಿಯರ್ ಸಂಪಾದಕತ್ವ, ಜತೆಯಲ್ಲಿ ಮಿಥಿಕ್ ಸೊಸೈಟಿಯಂತಹ ಖ್ಯಾತ ಸಾರ್ವಜನಿಕ ಸಂಸ್ಥೆಯ ಅಧ್ಯಕ್ಷತೆ, ಕರ್ನಾಟಕ ಇತಿಹಾಸ ಅಕಾಡೆಮಿಯ ಸ್ಥಾಪನೆ ಇತ್ಯಾದಿ ಎಲ್ಲವೂ ಅವರ ಬಹುಮುಖ ಪ್ರತಿಭೆ, ಅಧ್ಯಯನಶೀಲತೆ ಮತ್ತು ಪೂರ್ವಜೀವನದಲ್ಲಿ ಸಂಘದಿಂದ ಗಳಿಸಿದ ರಾಜಿಯೇ ಇಲ್ಲದ ರಾಷ್ಟ್ರನಿಷ್ಠೆಯ ಸಂಸ್ಕಾರಗಳದೇ ಅಭಿವ್ಯಕ್ತಿ.

ಸೂರ್ಯನಾಥರು ದಕ್ಷಿಣ ಕನ್ನಡ ಜಿಲ್ಲೆಯ ಗೌಡಸಾರಸ್ವತ ಸಮಾಜಕ್ಕೆ ಸೇರಿದವರು. ಈ ಸಮಾಜದಲ್ಲಿನ ಖ್ಯಾತ ವ್ಯಕ್ತಿಗಳಲ್ಲಿ ಒಬ್ಬರಾದ ರಾಷ್ಟ್ರಕವಿ ಮಂಜೇಶ್ವರ ಗೋವಿಂದಪೈ ಅವರು ಚಾರಿತ್ರಿಕ ಸಂಗತಿಗಳ ಬಗ್ಗೆ ಅದರಲ್ಲೂ ಶಾಸನಗಳಿಗೆ ಸಂಬಂಧಿಸಿದಂತಹವುಗಳ ಬಗ್ಗೆ – ಅತ್ಯಂತ ನಿಖರವಾದ ಮಾಹಿತಿ ಯುಳ್ಳವರಾಗಿದ್ದರು. ಇತಿಹಾಸದ ಕುರಿತು ಸೂರ್ಯನಾಥರ ಜ್ಞಾನವು ಅದೇ ಸ್ತರದ್ದು. ಕೈಗೆತ್ತಿಕೊಂಡ ಕಾರ್ಯ ಯಾವುದೇ ಇರಲಿ, ಅದರ ಕುರಿತು ತಳಸ್ಪರ್ಶಿ ಶೋಧ, ಸಮಗ್ರ ಮಾಹಿತಿ ಸಂಗ್ರಹ ಮತ್ತು ಪೂರ್ವಾಗ್ರಹವಿಲ್ಲದ ತರ್ಕಶುದ್ಧ ಪ್ರತಿಪಾದನೆ ಇವು ನಿಷ್ಪಕ್ಷ ಮನೋಭಾವದ ಇತಿಹಾಸಜ್ಞರಿಗಿರುವ ಗುಣವಿಶೇಷಗಳು. ಸೂರ್ಯನಾಥರು ತಮ್ಮ ಸಂಪಾದಕತ್ವದಲ್ಲಿ ಹೊರತಂದಿರುವ ಗ್ಯಾಜೆಟಿಯರ್ಗಳೇ ಅವರಲ್ಲಿನ ಗುಣಗಳಿಗೆ ಸಾಕ್ಷಿ. ಅವರು ತಮ್ಮ ಗೃಹಜೀವನದ ಆಯ್ಕೆಯಲ್ಲೂ ವರದಕ್ಷಿಣೆ ಬೇಡ, ಆಡಂಬರರಹಿತ ಸರಳವಿವಾಹವೇ ಸಾಕು ಎಂಬ ಆದರ್ಶವನ್ನು ಅನುಸರಿಸಿದವರು. ಅವರ ಬದುಕಿನ ಇವೆಲ್ಲ ಮಾಹಿತಿಗಳು ಈಗ ತೆರೆದ ಪುಸ್ತಕ.

(ಕೃಪೆ: ಮಿಥಿಕ್ ಸೊಸೈಟಿ ಪ್ರಕಟಿಸಿದ ಸೂರ್ಯನಾಥ ಕಾಮತರ ಅಭಿನಂದನ ಗ್ರಂಥ 'ಸೂರ್ಯಕೀರ್ತಿ') ●

**ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್ (JNCASR)**

**ಪದವಿಪೂರ್ವ ಹಾಗೂ ಪ್ರೌಢಶಾಲಾ ವಿಜ್ಞಾನ ಶಿಕ್ಷಕರಿಗೆ ಸಿ.ಎಸ್.ಆರ್. ರಾವ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ "ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ" ಗಳಿಗೆ ನಾಮಪತ್ರಗಳನ್ನು ಆಹ್ವಾನಿಸಲಾಗಿದೆ. ಪುರಸ್ಕಾರವು ಗೌರವಧನ ಹಾಗೂ ಪ್ರಶಸ್ತಿ ಪತ್ರಗಳನ್ನು ಒಳಗೊಂಡಿರುತ್ತದೆ. ನಾಮನಿರ್ದೇಶನ ಅರ್ಜಿಗಳನ್ನು ಜೆ.ಎನ್.ಸಿ.ಎ.ಆರ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.**

**(http://www.jncasr.ac.in/announce.php)**

**ಪೂರ್ಣಗೊಳಿಸಿದ ಅರ್ಜಿ ಮತ್ತು ಸಂಬಂಧಿಸಿದ ದಾಖಲೆಗಳನ್ನು "ಹಿರಿಯ ಆಡಳಿತ ಅಧಿಕಾರಿ, ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್, ಜಕ್ಕೂರು, ಬೆಂಗಳೂರು –560 064" ಇವರಿಗೆ 15ನೇ ಮಾರ್ಚ್ 2016 ಅಥವಾ ಮುಂಚಿತವಾಗಿ ತಲುಪುವಂತೆ ಕಳುಹಿಸಬೇಕು.**

# ಸಿಸಿಇ ಕುರಿತು ಶಾಸಕ ಅರುಣ ಶಹಾಪೂರ ಅವರ ಪ್ರಶ್ನೆಗಳಿಗೆ ಶಿಕ್ಷಣ ಸಚಿವರ ಉತ್ತರ

1) ರಾಜ್ಯದಲ್ಲಿ ಸಿಸಿಇ ಪದ್ಧತಿಯನ್ನು ಯಾವ ವರ್ಷದಿಂದ ಅಳವಡಿಸಿಕೊಳ್ಳಲಾಗಿದೆ?

**ಉತ್ತರ:** ರಾಜ್ಯದಲ್ಲಿ ಸಿಸಿಇ ಪದ್ಧತಿಯನ್ನು 2012–13ನೇ ಶೈಕ್ಷಣಿಕ ವರ್ಷದಿಂದ ಅಳವಡಿಸಿಕೊಳ್ಳಲಾಗಿದೆ.

2) ಈ ಪದ್ಧತಿಯ ಪರಿಣಾಮಕಾರಿ ಅನುಷ್ಠಾನಕ್ಕೆ ವಿದ್ಯಾರ್ಥಿ/ಶಿಕ್ಷಕರ ಅನುಪಾತ ಎಷ್ಟಿರಬೇಕು?

**ಉತ್ತರ:** ಸಿಸಿಇ ಪ್ರಕಾರ ವಿದ್ಯಾರ್ಥಿ ಹಾಗೂ ಶಿಕ್ಷಕರ ಅನುಪಾತ ನಿಗದಿಯಾಗಿರುವುದಿಲ್ಲ.

3) ಸಿಸಿಇ ಯಲ್ಲಿ ಅತಿ ಹೆಚ್ಚು ಒತ್ತಡ ನಿರ್ಮಾಣವಾಗಿದ್ದು ಅದರ ಸೂಕ್ತ ಮಾರ್ಪಾಡಿಗೆ ಸರ್ಕಾರದ ನಿಲುವೇನು?

**ಉತ್ತರ:** ಶಿಕ್ಷಕರಿಗೆ ಹಾಗೂ ಶಿಕ್ಷಣ ಅಧಿಕಾರಿಗಳಿಗೆ ತರಬೇತಿ ಸಾಹಿತ್ಯವನ್ನು ಹಾಗೂ ದಾಖಲೀಕರಣದ ನಮೂನೆಗಳನ್ನು ಸರಳೀಕರಿಸಿ ತರಬೇತಿ ನೀಡಲಾಗಿದೆ.

4) ಈಗಿರುವ ಪಠ್ಯ ಕ್ರಮಗಳು ಸಿಸಿಇ ಮಾದರಿಯ ಬೋಧನೆಗೆ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಉತ್ತರ:** ಈಗಿರುವ ಪಠ್ಯಕ್ರಮ ಸಿಸಿಇ ಮಾದರಿಯ ಬೋಧನೆಗೆ ಯಾವುದೇ ತೊಂದರೆ ಉಂಟುಮಾಡಿರುವುದಿಲ್ಲ. ಸಿಸಿಇ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ತರಬೇತಿ ಸಾಹಿತ್ಯವನ್ನು ರಚಿಸಿ ಶಿಕ್ಷಕರು, ಮಾರ್ಗದರ್ಶಕರಿಂದ ಹಿಮ್ಮಾಹಿತಿ ಪಡೆದು ಸಾಧನ ಪುಷ್ಠಿ ಪರಿಷ್ಕೃತ ಸಾಹಿತ್ಯವನ್ನು ಸರಳೀಕರಣಗೊಳಿಸಿದೆ. 2. ಎಲ್ಲಾ ಶಿಕ್ಷಕರಿಗೂ ಸಿಸಿಇ ತರಬೇತಿ ನೀಡಲಾಗಿದೆ. 3. ಉಪಗ್ರಹ ಆಧಾರಿತ ಕಾರ್ಯಕ್ರಮದಲ್ಲಿ ಸಿಸಿಇಗೆ ಸಂಬಂಧಿಸಿದಂತೆ ಶಿಕ್ಷಕರಲ್ಲಿ ಮೂಡಿದ್ದ ಗೊಂದಲಗಳಿಗೆ ಸೂಕ್ತ ಪರಿಹಾರ ನೀಡಲಾಗುತ್ತಿದೆ. 4. ಸಿಸಿಇ ಕುರಿತು ಶಿಕ್ಷಣ ಸಂವಾದ ರೇಡಿಯೋ ನೇರ ಫೋನ್ ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 5. ಶೈಕ್ಷಣಿಕ ಅದಾಲತ್ ಮೂಲಕ ಸಮಸ್ಯೆ ಇರುವ ಶಿಕ್ಷಕರು, ಬ್ಲಾಕ್ ಹಂತದಲ್ಲಿ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಅಳವಡಿಕೆಯಿಂದ ಬೋಧನೆಗೆ ಹೊರೆಯಾಗಿರುವುದಿಲ್ಲ. ಪೂರಕವಾಗಿದೆ.

5) ರಾಜ್ಯದಲ್ಲಿ ಪಠ್ಯಕ್ರಮ ಪಠ್ಯಪುಸ್ತಕ ಕರ್ನಾಟಕ ಕೆರಿಕ್ಯುಲಮ್ ಫ್ರೇಮ್ ವರ್ಕ್ ಬದಲಾವಣೆಗೆ ಸರ್ಕಾರ ಚಿಂತನೆ ನಡೆಸಿದೆಯೇ? (ಸಂಪೂರ್ಣ ವಿವರ ನೀಡುವುದು)

**ಉತ್ತರ:** ಎನ್.ಸಿ.ಎಫ್ 2005 ಆಧಾರಿತ 2007ರಲ್ಲಿ ಕರ್ನಾಟಕ ಪಠ್ಯಕ್ರಮ ಚೌಕಟ್ಟನ್ನು ಸಿದ್ಧಪಡಿಸಿ ಅದರನ್ವಯ ಪಠ್ಯ ಪುಸ್ತಕವನ್ನು ರಚಿಸಿ ಶಾಲೆಯಲ್ಲಿ ಅನುಷ್ಠಾನಗೊಳಿಸಲಾಗಿದೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದಿಂದ ಮಾರ್ಗದರ್ಶನ ಅನುಸರಿಸಲಾಗುವುದು.

6) ರಾಜ್ಯದಲ್ಲಿ ಐಟಿಐ ಕಾಲೇಜುಗಳಿಗೆ ಅನುದಾನ ಕೊಡುವ ಕುರಿತು ಸರ್ಕಾರದ ನಿಲುವೇನು?

**ಉತ್ತರ:** ರಾಜ್ಯದಲ್ಲಿ ಈಗಾಗಲೇ 196 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅನುದಾನ ನೀಡುತ್ತಿದ್ದು, ಹೊಸದಾಗಿ ಫೆಬ್ರವರಿ 2014ರವರೆಗೆ ಎನ್‌ಸಿವಿಟಿ (ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್) ಯಿಂದ ಸಂಯೋಜನೆ ಹೊಂದಿ ಏಳು ವರ್ಷ ಪೂರೈಸಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪೈಕಿ 546 ಸಂಸ್ಥೆಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅರ್ಹರಿರುವ /ನಿಗದಿತ ಸಮಯದೊಳಗೆ ದಾಖಲಾತಿಗಳನ್ನು ಸಲ್ಲಿಸಿರುವ 361 ಸಂಸ್ಥೆಗಳ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

7) ಈಗ ಅನುದಾನಕೊಳ್ಳಪಟ್ಟ ಐಟಿಐ ಕಾಲೇಜುಗಳ ಸಂಖ್ಯೆ ಎಷ್ಟು?

**ಉತ್ತರ:** 196

8) ಅನುದಾನಕ್ಕೊಳಪಡಬೇಕಾದ ಐಟಿಐ ಕಾಲೇಜುಗಳ ಸಂಖ್ಯೆ ಎಷ್ಟು?

**ಉತ್ತರ:** ಅಂತಿಮವಾಗಿಲ್ಲ.

9) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಅನುದಾನ, ಅನುದಾನ ರಹಿತ, ಸರ್ಕಾರಿ ಐಟಿಐ ಕಾಲೇಜುಗಳ ಸಂಖ್ಯೆ ಎಷ್ಟು ? (ಹೆಸರು ಮತ್ತು ವಿಳಾಸ ಸಹಿತ ಸಂಪೂರ್ಣ ವಿವರ ನೀಡುವುದು)

**ಉತ್ತರ:** ವಿಜಯಪುರ: ಸರ್ಕಾರಿ ಕೈಗಾರಿಕಾ ತರಬೇತಿ –9 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ –7 ಅನುದಾನರಹಿತ

ಪುಟ 14 ಕ್ಕೆ ➤

➢ ಪುಟ 13 ರಿಂದ.....

ಶಾಸಕ–ಸಚಿವರ ಪ್ರಶ್ನೋತ್ತರ

ಕೈಗಾರಿಕಾ ತರಬೇತಿ ಸಂಸ್ಥೆ –88 ಬಾಗಲಕೋಟೆ: ಸರ್ಕಾರಿ ಕೈಗಾರಿಕಾ ತರಬೇತಿ –9 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ –10 ಅನುದಾನರಹಿತ ಕೈಗಾರಿಕಾ ತರಬೇತಿ ಸಂಸ್ಥೆ –57. ಬೆಳಗಾವಿ: ಸರ್ಕಾರಿ ಕೈಗಾರಿಕಾ ತರಬೇತಿ –15 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ –8 ಅನುದಾನರಹಿತ ಕೈಗಾರಿಕಾ ತರಬೇತಿ ಸಂಸ್ಥೆ –106 (ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.)

10) ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ನಿರ್ವಹಣೆಯನ್ನು ಯಾವ ಸಂಸ್ಥೆಯಿಂದ ಮಾಡಲಾಗುತ್ತಿದೆ?

**ಉತ್ತರ:** ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ನಿರ್ವಹಣೆಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ನಿರ್ವಹಿಸಲಾಗುತ್ತಿದೆ.

11) ಆ ಸಂಸ್ಥೆಯ ಆಡಳಿತ ಕಛೇರಿಗಳು ಎಲ್ಲೆಲ್ಲಿ ಅಸ್ತಿತ್ವದಲ್ಲಿರುತ್ತವೆ?

**ಉತ್ತರ:** 1. ನಂ–179, ರೂಪಾ ಕಾಂಪ್ಲೆಕ್ಸ್, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ಆಡಳಿತ ಕಛೇರಿ ಕಾರ್ಯನಿರ್ವಹಿಸುತ್ತಿದೆ. 2. ಸಂಘವು ಜಿಲ್ಲಾ ಮಟ್ಟದಲ್ಲಿ ತನ್ನದೇ ಆದ ಕಛೇರಿಗಳನ್ನು ಹೊಂದಿರುವುದಿಲ್ಲ.

12) ಆ ಸಂಸ್ಥೆಯ ಆಡಳಿತವನ್ನು ಎಷ್ಟು ಹಂತಗಳ ಆಡಳಿತ ಕಛೇರಿಗಳ ಮೂಲಕ ನಡೆಸಲಾಗುತ್ತಿದೆ; ಈ ಸಂಸ್ಥೆ ಯಾವ ಯಾವ ಇಲಾಖೆಯಡಿ ಅನುದಾನ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿದೆ?

**ಉತ್ತರ:** 1. ವಸತಿ ಶಾಲೆಗಳ ನಿರ್ವಹಣೆಯು ಜಿಲ್ಲಾ ಮಟ್ಟದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಹಾಗೂ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಉಪಯೋಜನೆ ರವರ ಉಸ್ತುವಾರಿಯಲ್ಲಿ ನಿರ್ವಹಣೆ ಆಗುತ್ತಿದೆ. 2. ವಸತಿ ಶಾಲೆಗಳ ನಿರ್ವಹಣೆ ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಆಯವ್ಯಯದಲ್ಲಿ ಅನುದಾನ ನಿಗದಿಯಾಗಿ ಬಿಡುಗಡೆಯಾಗುತ್ತಿದ್ದು, ಈ ಅನುದಾನದಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

13) ಈ ಸಂಸ್ಥೆಯ ಅಡಿ ಶಾಲೆಗಳಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ ಹಾಗೂ ಎಷ್ಟು ಶಿಕ್ಷಕರಿದ್ದಾರೆ?

**ಉತ್ತರ:** 1. 2015–16 ನೇ ಸಾಲಿನಲ್ಲಿ 105471 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. 2. ಪ್ರಸ್ತುತ 3152 ಖಾಯಂ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.

14) ಸೃಷ್ಟಿಯಾಗಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

**ಉತ್ತರ:** ಈ ವಸತಿ ಶಾಲೆಗಳಲ್ಲಿ ಸೃಷ್ಟಿಯಾಗಿರುವ ಬೋಧಕ ಸಿಬ್ಬಂಧಿಗಳ ಹುದ್ದೆಗಳ ಸಂಖ್ಯೆ –5488.

15) ಕೇಂದ್ರ ಆಡಳಿತ ಕಛೇರಿಯಲ್ಲಿ ಹಾಗೂ ಬೇರೆ ಹಂತಗಳಲ್ಲಿ ಆಡಳಿತ ಕಛೇರಿಗಳಿದ್ದರೆ, ಅಲ್ಲಿರುವ ಸಿಬ್ಬಂದಿಗಳು ಯಾರು; ಅವರ ಹೆಸರು ಹಾಗೂ ಹುದ್ದೆಯ ದರ್ಜೆಗಳೇನು; ಈ ನೌಕರರುಗಳು ಸರ್ಕಾರಿ ಸಿಬ್ಬಂದಿಗಳೇ; ಅನ್ಯ ಕಾರ್ಯ ನಿಮಿತ್ತ ಸಿಬ್ಬಂದಿಗಳೇ; (ಪ್ರತಿಯೊಬ್ಬರ ಸಂಪೂರ್ಣ ವಿವರ ನೀಡುವುದು) ?

**ಉತ್ತರ:** 1. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ 89 ಅಧಿಕಾರಿ/ಸಿಬ್ಬಂದಿಗಳು ಹಾಗೂ ವಿವಿಧ 27 ಜಿಲ್ಲೆಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುವ ಸ್ಥಳದಲ್ಲಿ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಿಬ್ಬಂದಿಗಳ ಪೈಕಿ(1) 22 ಅಧಿಕಾರಿಗಳು ಬೇರೆ ಇಲಾಖೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 2) ವಸತಿ ಶಾಲೆಗಳಿಂದ ನಿಯೋಜನೆ ಮೇರೆಗೆ ತಾತ್ಕಾಲಿಕವಾಗಿ 17 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 3) ಗುತ್ತಿಗೆ ಆಧಾರದ ಮೇಲೆ 13 ಅಧಿಕಾರಿಗಳು/ ಸಿಬ್ಬಂದಿಗಳು ಹಾಗೂ 4) ಹೊರಸಂಪನ್ಮೂಲದ ಏಜೆನ್ಸಿ ಮುಖಾಂತರ 64 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ದರ್ಜೆವಾರು ಅನುಬಂಧಗಳ ವಿವರಗಳನ್ನು ಅನುಬಂಧ–(1) ರಿಂದ (4)ರಲ್ಲಿ ನೀಡಲಾಗಿದೆ.

16) ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು: ಕೆಆರ್ಇಐಎಸ್ ಸಂಸ್ಥೆಯಿಂದ ಏನೇನು ಕಾರ್ಯಗಳು ನಡೆಯುತ್ತಿವೆ? (ವಿವರ ನೀಡುವುದು)

**ಉತ್ತರ:** 1. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ ಮಂಜೂರಾದ ಹುದ್ದೆಗಳು 84 ಹಾಗೂ ನಿಯೋಜನೆ ಮೇಲೆ ಇತರೆ ಇಲಾಖೆಗಳಿಂದ ಖಾಯಂಯಾಗಿ ಭರ್ತಿಯಾದ ಹುದ್ದೆಗಳ ಸಂಖ್ಯೆ–22.ಖಾಲಿ ಹುದ್ದೆಗಳ ಸಂಖ್ಯೆ–62. 2. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ವಸತಿ ಶಾಲೆಗಳ ನಿರ್ವಹಣೆ, ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣ, ವಸತಿ ಶಾಲೆಗಳ ಸಿಬ್ಬಂದಿಗಳ ನೇಮಕಾತಿ, ವಸತಿ ಶಾಲೆಗಳ ಅನುದಾನದ ಬಿಡುಗಡೆ, ವಿವಿಧ ಶಾಸಕಾಂಗ

ಪುಟ 15 ಕ್ಕೆ ➢

➢ ಪುಟ 14 ರಿಂದ.....

ಶಾಸಕ–ಸಚಿವರ ಪ್ರಶ್ನೋತ್ತರ

ಸಭೆಗಳಿಗೆ ಮಾಹಿತಿ ನೀಡುವುದು ಹಾಗೂ ಸಭೆಗೆ ಹಾಜರಾಗುವುದು. ಸರ್ಕಾರಕ್ಕೆ ವಸತಿ ಶಾಲೆಗಳ ನಿರ್ವಹಣೆ ಬಗ್ಗೆ ವರದಿ ನೀಡುವುದು ಇತ್ಯಾದಿ.

17) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಹಾಗೂ ಪದವಿ ಕಾಲೇಜುಗಳು ಸೂಕ್ತ ಕಟ್ಟಡ, ಮೂಲಭೂತ ಸೌಕರ್ಯ, ಬೋಧಕೇತರ ಕೊರತೆ, ಬೋಧಕೇತರರು ಶೂನ್ಯಾವಸ್ಥೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
**ಉತ್ತರ:** ಬಂದಿದೆ.

18) ಆರ್.ಎಂ.ಎಸ್.ಎ. ಯೋಜನೆಯಡಿ ಹಾಗೂ ವಿವಿಧ ಯೋಜನೆಗಳ ಅಡಿ ಪ್ರೌಢಶಾಲಾ ಕಟ್ಟಡಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳು ನಿರ್ಮಾಣವಾಗಿದೆಯೇ? ಕಾಮಗಾರಿ ವೆಚ್ಚ ಹೆಚ್ಚಳವಾಗಿರುವ ಕಾರಣಕ್ಕಾಗಿ ಬಿಕ್ಕಟ್ಟು ನಿರ್ಮಾಣವಾಗಿರುವುದು ನಿಜವೇ; ಈ ಬಿಕ್ಕಟ್ಟು ಪರಿಹರಿಸಿ ಹಣ ಒದಗಿಸಲು ಸರ್ಕಾರದ ಪರಿಹಾರ ಉಪಾಯಗಳೇನು?
**ಉತ್ತರ:** ಹೌದು. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳು ಈ ಕೆಳಕಂಡ ಅಂಶಗಳಿಂದ ಕಾಮಗಾರಿ ವೆಚ್ಚದಲ್ಲಿ ಹೆಚ್ಚಳವಾಗಿದೆ. 1. ಮಣ್ಣಿನ ಕ್ಷಮಾಧಾರಣ ಶಕ್ತಿಗೆ ಅನುಗುಣವಾಗಿ ತಯಾರಿಸಲಾದ ವಿನ್ಯಾಸದಿಂದ. 2. ನಿವೇಶನ ಅಳತೆಯಲ್ಲಿನ ಕೊರತೆಯಿಂದ ಪರಿಷ್ಕೃತ ನಕ್ಷೆ ಮತ್ತು ವಿನ್ಯಾಸದಿಂದ ಅಂದಾಜಿನಲ್ಲಿ ಅಳವಡಿಸಲಾದ ಪರಿಮಾಣದಲ್ಲಿನ ವ್ಯತ್ಯಾಸ. 3. ಕಾಮಗಾರಿ ಪೂರ್ಣಗೊಳಿಸಲು ಅವಶ್ಯಕವಾದ ಹೆಚ್ಚುವರಿ ಅಂಶಗಳನ್ನು ಅಳವಡಿಸುವುದರಿಂದ. ಈ ಸಂಬಂಧ ಹೆಚ್ಚುವರಿ ಪರಿಮಾಣಗಳ ಮತ್ತು ಹೆಚ್ಚುವರಿ ಅಂಶಗಳ ತಃಖ್ತೆ ತಯಾರಿಸಲು ಸೂಚಿಸಲಾಗಿದೆ. ಪದವಿ ಪೂರ್ವ ಕಾಲೇಜು ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಆರ್.ಐ.ಡಿ.ಎಫ್–19 ಮತ್ತು 20ರಡಿಯ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಐ.ಡಿ.ಎಲ್) ಸಂಸ್ಥೆಗೆ ವಹಿಸಲಾಗಿದ್ದು, ಇತ್ತೀಚಿನ ಎಸ್.ಆರ್.ದರಗಳಂತೆ ಹೆಚ್ಚುವರಿ ಕೋರಿದ್ದರು. ಅದರಂತೆ ಆರ್.ಐ.ಡಿ.ಎಫ್– 19 ಕಾಮಗಾರಿಗಳಿಗೆ ಹೆಚ್ಚುವರಿ ಒದಗಿಸಿ, ದಿನಾಂಕ:21.11.2015 ರಂದು ಆದೇಶ ನೀಡಲಾಗಿದೆ. ಆರ್.ಐ.ಡಿ.ಎಫ್–20 ಕಾಮಗಾರಿಗಳಿಗೆ ಹೆಚ್ಚುವರಿ ಒದಗಿಸುವ ಬಗ್ಗೆ ಶೀಘ್ರ ಕ್ರಮವಹಿಸಲಾಗುತ್ತಿದೆ.

19) ಈ ಯೋಜನೆಗಳ ಅಡಿ ಕಳಪೆ ಕಾಮಗಾರಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?
**ಉತ್ತರ:** ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಮತ್ತು ಪರಿಶೀಲಿಸಲು ಮೂರನೇ ತಂಡ ಸಮಾಲೋಚಕರನ್ನು ನೇಮಿಸಲಾಗಿದ್ದು, ಸದರಿಯವರಿಂದ ಗುಣಮಟ್ಟದ ಬಗ್ಗೆ ಕಾಲ–ಕಾಲಕ್ಕೆ ವರದಿಯನ್ನು ಸಮಾಲೋಚಕರ ಶಿಫಾರಸ್ಸಿನಂತೆ ಲೋಪದೋಷಗಳನ್ನು ಸರಿಪಡಿಸಿ ಕಾಮಗಾರಿಗಳನ್ನು ಮುಂದುವರಿಸಲಾಗುತ್ತಿವೆ.

20) 2012–13, 2013–14, 2014–15, 2015–16ನೇ ಸಾಲಿನ ಹಣಕಾಸು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವಿವಿಧ ಯೋಜನೆಗಳಡಿ ಬಂದಿರುವ ಹಣದ ಮೊತ್ತ ಎಷ್ಟು? (ಪ್ರತಿ ಯೋಜಾನಾವಾರು ಹಾಗೂ ಒಟ್ಟು ವಿವರಗಳನ್ನು ಒದಗಿಸುವುದು)
**ಉತ್ತರ:** ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವರ್ಷವಾರು ಬಿಡುಗಡೆಯಾಗಿರುವ ಅನುದಾನದ ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

21) ರಾಜ್ಯದಲ್ಲಿ "ಥಾಮಸ್ ವರದಿ" ಯನ್ನು ಜಾರಿಗೊಳಿಸಲಾಗಿದ್ದು ಯಾವಾಗ, ಸರ್ಕಾರದ ಆದೇಶದ ಪ್ರತಿ ನೀಡುವುದು?
**ಉತ್ತರ:** ಥಾಮಸ್ ವರದಿಯ ಶಿಫಾರಸ್ಸಿನ ಮೇರೆಗೆ ದಿನಾಂಕ: 29/12/2014ರಂದು ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗಾಚ್ಯುಯಿಟಿ, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ಭವಿಷ್ಯವರ್ತಿಯಾಗಿ ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಪ್ರತಿ ಲಗತ್ತಿಸಿದೆ.

22) ಇದರನ್ವಯ ಅನುದಾನಿತ ಐಟಿಐ ಕಾಲೇಜಿನಲ್ಲಿರುವ ಸಿಬ್ಬಂದಿಗೆ ನೀಡಿರುವ ಸೌಲಭ್ಯಗಳು ಯಾವುವು; ನಿವೃತ್ತಿ ಸೌಲಭ್ಯಗಳು ಯಾವುವು ನೀಡದಿದ್ದರೆ ಯಾವಾಗ ನೀಡಲಾಗುವುದು; ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಪೂರ್ಣಗೊಳ್ಳುವುದು?
**ಉತ್ತರ:** ಶ್ರೀ ಪಿ.ಎಸ್.ಎಸ್. ಥಾಮಸ್ ವರದಿಯ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು ಭವಿಷ್ಯವರ್ತಿಯಾಗಿ ನೀಡಲು ಸರ್ಕಾರದ ಮಂಜೂರಾತಿ ನೀಡಿದ್ದು, ಇದರನ್ವಯ 196 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ 178 ಸಂಸ್ಥೆಗಳಿಂದ 1888 ಸಿಬ್ಬಂದಿಗಳ ಸೇವಾವಹಿಗಳನ್ನು ಸತ್ಯಾಪನೆ ಮಾಡಿ ವೇತನ ನಿಗದಿಗೊಳಿಸಲಾಗಿದೆ. ಕಡತಗಳನ್ನು ಸಲ್ಲಿಸದೇ ಇರುವ 18ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ನೋಟಿಸು ಜಾರಿ ಮಾಡಲಾಗಿದೆ. ಪರಿಶೀಲನೆ ವೇಳೆ ಅನೇಕ ಪ್ರಕರಣಗಳಲ್ಲಿ ಕೆಲಗೊಂದಲಗಳು ಹಾಗೂ ನ್ಯೂನ್ಯತೆಗಳು ಕಂಡು ಬಂದಿದ್ದು, ಇವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಹಾಗೂ ಕಾರ್ಯಗತಗೊಳಿಸಲು ತ್ವರಿತ ಕ್ರಮಕೈಗೊಳ್ಳಲಾಗುವುದು. ●

# ಸಂಘದ ವಾರ್ತೆ

## ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆ ಕಾರ್ಯಾಗಾರ

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗೋಸ್ಕರ ಸಾರ್ವಜನಿಕ ಶಿಕ್ಷಣ ಇಲಾಖೆ, ಮಾಧ್ಯಮಿಕ ಶಿಕ್ಷಕ ಸಂಘ ಕಲಬುರಗಿ ಘಟಕ ಹಾಗೂ ದಿಶಾ ವಿಜ್ಞಾನ ಪದವಿ ಪೂರ್ವ ಕಾಲೇಜು ಕಲಬುರಗಿ ಇವರುಗಳ ಸಹಯೋಗದಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳಿಂದ ಜಿಲ್ಲೆಯ ಗಣಿತ, ವಿಜ್ಞಾನ, ಸಮಾಜವಿಜ್ಞಾನ ಶಿಕ್ಷಕರ ಕಾರ್ಯಾಗಾರವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತಾಡಿದ ಪ್ರಭಾರಿ ಉಪನಿರ್ದೇಶಕ ಶ್ರೀ ಎಸ್. ಪಿ. ಸುಳ್ಳದ ಮಾತನಾಡಿ ಇಲಾಖೆ ತೆರದ ಪುಸ್ತಕ. ರಸಪ್ರಶ್ನೆ, ಶಿಕ್ಷಕರು ವಾರದಲ್ಲೊಂದು ದಿನ ಬೇರೆ ಶಾಲೆಯಲ್ಲಿ ಪಾಠ ಮಾಡುವುದು, ಸರಣಿ ಪರೀಕ್ಷೆ, ಮಕ್ಕಳು ಹಾಗೂ ಪಾಲಕರೊಂದಿಗೆ ಫೋನ್ ಇನ್ ಕಾರ್ಯಕ್ರಮ ಹೀಗೆ ಹತ್ತಾರು ಕಾರ್ಯಕ್ರಮ ನಡೆಯುತ್ತಿದ್ದು, ಮಾಧ್ಯಮಿಕ ಶಿಕ್ಷಕ ಸಂಘ ಇಲಾಖೆ ಜೊತೆ ಕೈ ಜೋಡಿಸಿ ಈ ಕಾರ್ಯಾಗಾರ ಹಮ್ಮಿಕೊಂಡಿರುವುದು ಫಲಿತಾಂಶ ಸುಧಾರಣೆಗೆ ಪೂರಕವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಘದ ಗೌರವ ಅಧ್ಯಕ್ಷ ಹಾಗೂ ಕಲಬುರಗಿ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಭರತರಾಜ ಸಾವಳಗಿ ಮಾತನಾಡಿ ಮಕ್ಕಳ ಭವಿಷ್ಯ ಉಜ್ವಲ ಆಗಬೇಕೆಂಬ ಮಹದಾಸೆಯೊಂದಿಗೆ ಪಾಲಕರು ಶಾಲೆಗೆ ಕಳುಹಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳ ಕಲಿಕಾ ದೌರ್ಬಲ್ಯ ಗುರುತಿಸಿ, ಅರಿತು ಅದಕ್ಕನುಗುಣವಾಗಿ ಬೋಧಿಸಿ ಮಾರ್ಗದರ್ಶನ ನೀಡುವುದು ಶಿಕ್ಷಕರ ಜವಾಬ್ದಾರಿಯಾಗಿದೆ. ಅಲ್ಲದೇ ಶಿಕ್ಷಕರಿಗೂ ಕೂಡ ಪುನಃಶ್ಚೇತನ ತರಬೇತಿಯ ಅವಶ್ಯಕತೆಯಿದ್ದು, ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯಾಗಾರ ಹಮ್ಮಿಕೊಂಡಿರುವ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯ ಶ್ಲಾಘನೀಯ ಎಂದರು.

ಸಂಘದ ಕಲಬುರಗಿ ಜಿಲ್ಲಾಧ್ಯಕ್ಷ ಚಂದ್ರಶೇಖರ ಎಸ್ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ ಇಡೀ ಶಿಕ್ಷಣ ವ್ಯವಸ್ಥೆಯ ಅಡಿಪಾಯವಾಗಿ ಕಾರ್ಯ ನಿರ್ವಹಿಸುವುದು ಸಂಘದ ಪ್ರಮುಖ ಉದ್ದೇಶವಾಗಿದ್ದು, ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆ ಗುಣಾತ್ಮಕ ಶಿಕ್ಷಣಕ್ಕಾಗಿ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಅಂತಹವುಗಳಲ್ಲಿ ಇದು ಒಂದಾಗಿದ್ದು ತರಬೇತಿಯ ಸದುಪಯೋಗ ಪಡೆದುಕೊಂಡು ಫಲಿತಾಂಶ ಉತ್ತಮಪಡಿಸೋಣ ಎಂದು ಕರೆ ನೀಡಿದರು.

ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ಶಿವಮೊಗ್ಗದ ಕೆ.ಎಸ್. ರಾಮಚಂದ್ರ, ರಾಮನಗರದ ಪುಟ್ಟಸ್ವಾಮಿ, ವಿಜಯಪುರದ ನಾರಾಯಣ ಬಾಬಾನಗರ ಆಗಮಿಸಿ ತರಬೇತಿ ನೀಡಿದರು.

ವಿಭಾಗ ಪ್ರಮುಖ ಬಸರಕೋಡ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ಇಲಾಖೆಯ ಕಲಬುರಗಿ ದಕ್ಷಿಣ ವಲಯದ ಬಿಇಓ ಶ್ರೀದೊಡ್ಡರಂಗಪ್ಪ, ವಿಷಯ ಪರಿವೀಕ್ಷಕರಾದ ಸಿ.ಬಿ.ಪಾಟೀಲ, ಯುವರಾಜ ಗಾಡಿ, ಷಹನಾಜ ಬೇಗಂ, ವೀರಭದ್ರಪ್ಪ ಹಾಗೂ ಸಂಘಟನೆಯ ಪ್ರಮುಖರಾದ ಮಹೇಶ ದೇವಣಿ,ಚಂದ್ರಶೇಖರ ಗೋಸಾಲ, ಅಶೋಕ ಜೋಷಿ, ಸಿದ್ದು ಕಕ್ಕಳಮೇಲಿ, ಜಿಲ್ಲೆಯ ಸುಮಾರು ಮೂರು ನೂರಕ್ಕೂ ಹೆಚ್ಚು ಶಿಕ್ಷಕರು ಭಾಗವಹಿಸಿದ್ದರು. ಸಂಘದ ಕಾರ್ಯದರ್ಶಿ ಅಮೃತ ಮಾಲಿಪಾಟೀಲ ನಿರೂಪಿಸಿದರೆ, ಚಂದ್ರು ಪವಾರ ವಂದಿಸಿದರು.

**ವರದಿ : ಶ್ರೀ ಚಂದ್ರಶೇಖರ ಎಸ್. ಪಾಟೀಲ್,**
**ಕಲ್ಬುರ್ಗಿ ಜಿಲ್ಲಾ ಅಧ್ಯಕ್ಷರು**

## ಸಂಕಲ್ಪ ದಿನಾಚರಣೆ

ದಿನಾಂಕ 19.01.2016 ರಂದು ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಸಂಕಲ್ಪ ದಿನ ಕಾರ್ಯಕ್ರಮವನ್ನು ಕಲಬುರಗಿ ನಗರದ ದಿಶಾ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಮಾಧ್ಯಮಿಕ ಶಿಕ್ಷಕ ಸಂಘ ಕಲಬುರಗಿ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮ ಪೂಜ್ಯ ಪರಮಾನಂದ ಸ್ವಾಮಿಗಳು ವಹಿಸಿ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆನೀಡಿದರು.

ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ರಾಜ್ಯ ಸಭಾ ಸದಸ್ಯ ಡಾ॥ ಬಸವರಾಜ ಸೇಡಂ ಆಗಮಿಸಿ ಮಾತನಾಡಿ ಏಕಾಗ್ರತೆ, ದೇಶಭಕ್ತಿ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಇಂದಿನ ಯುವಕರು ಮಾಡಬೇಕೆಂದು ಕರೆನೀಡಿದರು. ಅಲ್ಲದೇ ಮಾಧ್ಯಮಿಕ ಶಿಕ್ಷಕ ಸಂಘದ ಈ ಕಾರ್ಯವನ್ನು ಪ್ರಶಂಸಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲಬುರಗಿ ಜಿಲ್ಲಾಧ್ಯಕ್ಷ ಚಂದ್ರಶೇಖರ ಪಾಟೀಲ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಿಶಾ ಕಾಲೇಜಿನ ಪ್ರಾಂಶುಪಾರಾದ ಶ್ರೀ ಶಿವಾನಂದ ಖಜೂರಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಅಮೃತ ಪಾಟೀಲ, ಖಜಾಂಚಿ ಮಹೇಶ ದೇವಣಿ, ಚಂದ್ರಶೇಖರ ಗೋಪಾಲ, ಗುರುಶಾಂತ ಅಕ್ಕಾ, ಡಾ॥ ಬಸವರಾಜ ಅಂಗಡಿ ಹಾಗೂ 50ಕ್ಕೂ ಹೆಚ್ಚು ಶಿಕ್ಷಕರು ಹಾಗೂ ಮಕ್ಕಳು ಪಾಲ್ಗೊಂಡಿದ್ದರು.

**ವರದಿ : ಶ್ರೀ ಚಂದ್ರಶೇಖರ ಎಸ್. ಪಾಟೀಲ್,**
**ಕಲ್ಬುರ್ಗಿ ಜಿಲ್ಲಾ ಅಧ್ಯಕ್ಷರು**

ಪುಟ 17 ಕ್ಕೆ ➤

➢ ಪುಟ 16 ರಿಂದ.....

ಸಂಘದ ವಾರ್ತೆ....

# ವಿವೇಕಾನಂದರ ಆತ್ಮ ವಿಶ್ವಾಸ, ಗುರಿ ಸಾಧನೆ ಯುವ ಜನತೆಗೆ ಆದರ್ಶ

**ರಾಮನಗರ:** ಸ್ವಾಮಿ ವಿವೇಕಾನಂದರಲ್ಲಿದ್ದ ಆತ್ಮ ವಿಶ್ವಾಸ ಮತ್ತು ಗುರಿ ಸಾಧನೆ ಇಂದಿನ ಯುವ ಸಮುದಾಯಕ್ಕೆ ಆದರ್ಶವಾದಾಗ ಮಾತ್ರ ರಾಷ್ಟ್ರದಲ್ಲಿ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುತ್ತದೆ ಎಂದು ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ಬಿ ಬಸವರಾಜಪ್ಪ ಹೇಳಿದರು.

ನಗರದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಸೆಕೆಂಡರಿ ಶಿಕ್ಷಕ ಸಂಘದ ರಾಮನಗರ ಜಿಲ್ಲಾ ಘಟಕದ ವತಿಯಿಂದ 12.1.16 ರಂದು ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದರ 153ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪ್ರತಿಯೊಬ್ಬ ಭಾರತೀಯರಲ್ಲಿ ವಿವೇಕಾನಂದ ವಾಣಿಯನ್ನು ಮೈಗೂಡಿಸಿಕೊಳ್ಳಬೇಕು, ಅವರ ಸಂದೇಶಗಳು ನಿತ್ಯ ನೂತನವಾಗಬೇಕು ಎಂದು ಸಲಹೆ ನೀಡಿದರು.

ಸೆಕೆಂಡರಿ ಶಿಕ್ಷಕ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಎ ಜಯಣ್ಣ ಮಾತನಾಡಿ, ಭಾರತದಂತಹ ರಾಷ್ಟ್ರದಲ್ಲಿನ ಯುವ ಸಮುದಾಯಕ್ಕೆ ಸ್ವಾಮಿ ವಿವೇಕಾನಂದರಿಗಿಂತ ಮತ್ತೊಬ್ಬ ಆದರ್ಶ ಪುರುಷ ಸಿಗಲು ಸಾಧ್ಯವಿಲ್ಲ. ಸ್ವಾಮಿ ವಿವೇಕಾನಂದರು ಯುವ ಸಮುದಾಯಕ್ಕೆ ಅಪರೂಪದ ರೋಲ್ ಮಾಡೆಲ್ ಎಂದು ಶ್ಲಾಘಿಸಿದರು.

ಸೆಕೆಂಡರಿ ಶಿಕ್ಷಕ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಕೆ.ರಮೇಶ್, ಜಿಲ್ಲಾ ಘಟಕದ ಉಪಾಧ್ಯಕ್ಷ ಎಚ್.ಪಿ ಮಹಾಲಿಂಗಯ್ಯ ಕಾರ್ಯದರ್ಶಿ ಬಿ.ಚನ್ನೇಗೌಡ, ಶಿಕ್ಷಕರಾದ ಮಂಗಳಾನಾಯಕ್, ಎಂ ಎಸ್ ಜ್ಯೋತಿ, ರತ್ನಮ್ಮ, ವಿಜಯ ಲಕ್ಷ್ಮಿ, ಉಪೇಂದ್ರ, ಚಿನ್ನ, ಗಿರಿಯ್ಯ, ಪ್ರಭುಲಿಂಗರಾಜು ಮುಂತಾದವರು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಸಂಕಲ್ಪ ದೀಕ್ಷೆಯನ್ನು ತೆಗೆದುಕೊಂಡರು.

ವರದಿ: **ಸಿ.ವಿ ಜಯಣ್ಣ,** ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ರಾಮನಗರ ಜಿಲ್ಲೆ

## ತಿದ್ದುಪಡಿ

**ಶಿಕ್ಷಕ ಸಮಾಚಾರದ 2016 ಜನವರಿ ಸಂಚಿಕೆಯ ಪುಟ 12ರಲ್ಲಿ ಅನುದಾನಿತ ಶಾಲಾ ಶಿಕ್ಷಕರಿಗೆ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ಮುದ್ರಿತವಾಗಿದೆ. ಬದಲಾಗಿ ಅದು ಅನುದಾನಿತ ಶಾಲಾ ಶಿಕ್ಷಕರಿಗೆ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ ಎಂದು ಮುದ್ರಿತವಾಗಬೇಕಾಗಿತ್ತು. ಕಣ್ತಪ್ಪಿನಿಂದ ಆದ ಅಚಾತುರ್ಯಕ್ಕಾಗಿ ವಿಷಾದಿಸುತ್ತೇವೆ.**

– ಸಂಪಾದಕರು

# ಇತಿಹಾಸ ನಿರ್ಮಿಸಿದವರು ನಮಗೆ ಸ್ಫೂರ್ತಿಯ ಸೆಲೆ

ಇತಿಹಾಸವನ್ನು ನಿರ್ಮಿಸಿದವರು ನಮಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ದೇಶಭಕ್ತರು ಶತಮಾನಗಳುದ್ದಕ್ಕೂ ಮುಂಬರುವ ಜನಾಂಗದವರಿಗೆ ಸ್ಫೂರ್ತಿ ಕೊಡುತ್ತಲೇ ಇದ್ದಾರೆ. ರಾಷ್ಟ್ರಾಭಿಮಾನ ದೇಶದ ಸಂಸ್ಕೃತಿ, ಸಭ್ಯತೆಗಳ ಬಗ್ಗೆ ಗೌರವಾದರ ಬಹುಮುಖ್ಯ ವಾಗಿದ್ದು ವಿದ್ಯಾರ್ಥಿಗಳು ಪಠ್ಯ ಪುಸ್ತಕದ ಜೊತೆಯಲ್ಲಿ ದೇಶ ವಿದೇಶಗಳ ಇತಿಹಾಸ ಕುರಿತು ಸಮಗ್ರ ಅಧ್ಯಯನ ಮಾಡುವುದು ಅವಶ್ಯಕವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಅಮರನಾಥ ಪಾಟೀಲ ಅಭಿಪ್ರಾಯಪಟ್ಟರು.

ನಗರದ ಡಿ.ಡಿಯು ಶಿಕ್ಷಣ ಸಂಸ್ಥೆಯಲ್ಲಿ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದ ಹಾಗೂ ನೇತಾಜಿ ಸುಭಾಷ ಚಂದ್ರಭೋಸರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

ಸಾವಿರಾರು ವರ್ಷಗಳ ಇತಿಹಾಸವಿರುವ ಭವ್ಯ ಭಾರತಕ್ಕೆ ವಿವೇಕಾನಂದರು, ನೇತಾಜಿಯವರ ತತ್ವಾದರ್ಶಗಳು ವಿದ್ಯಾರ್ಥಿ ದಿಶೆಯಲ್ಲಿಯೇ ಆದರ್ಶವಾಗಿಟ್ಟುಕೊಳ್ಳಬೇಕು ಎಂದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಶಿಕ್ಷಣದಿಂದ ವಿಕಸನ ಸಾಧ್ಯವಿಲ್ಲ. ವಿದ್ಯಾರ್ಥಿಗಳು ನಾಡಿನ, ದೇಶ, ವಿದೇಶಗಳ ಸಮಗ್ರ ಮಾಹಿತಿಯ ಅಧ್ಯಯನ ಅವಶ್ಯವಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಮೈಸೂರು ಮಹಾರಾಜ ಕಾಲೇಜು ಉಪನ್ಯಾಸಕ ಶಿವಾನಂದ ಸಿಂಧನಕೇರಾ ದೇಶ ಮತ್ತು ದೇಶದ ಮಹಾನ್ ನಾಯಕರುಗಳು ದೇಶಕ್ಕಾಗಿ ಮಾಡಿದ ಸೇವೆ ಬಲಿದಾನಗಳನ್ನು ಕುರಿತು ಸಮಗ್ರವಾಗಿ ತಿಳಿಸಿದರು.

ರಾಜ್ಯ ಮಾಧ್ಯಮಿಕ ಸಂಘದ ಉದ್ದೇಶ ಮತ್ತು ಸಮಸ್ಯೆಗಳ ಕುರಿತು ಶಿಕ್ಷಕ ಅನಿಲಕುಮಾರ್ ಬಿರಾದಾರ ಪ್ರಾಸ್ತಾವಿಕವಾಗಿ ತಿಳಿಸಿದರು. ಬಿ.ಜಿ ಪಾಟೀಲ ಸ್ವಾಗತಿಸಿದರು.

ವೇದಿಕೆಯಲ್ಲಿ ಸಂಘದ ವಿಭಾಗ ಪ್ರಮುಖ ಮಹೇಶ ಬಸರಕೋಡ, ಜಿಲ್ಲಾಧ್ಯಕ್ಷ ಚಂದ್ರಶೇಖರ ಪಾಟೀಲ, ಡಿ.ಡಿ ಯು ಶಿಕ್ಷಣ ಸಂಸ್ಥೆಯ ವಿದ್ಯಾ ಭೀಮಣ್ಣ ಮೇಟಿ ಉಪಸ್ಥಿತರಿದ್ದರು. ನಗರದ ವಿವಿಧ ಕಾಲೇಜುಗಳ ಪ್ರಾಚಾರ್ಯರು ಉಪನ್ಯಾಸಕರು, ಶಿಕ್ಷಕ ವೃಂದದವರು ಮತ್ತು ವಿದ್ಯಾರ್ಥಿ– ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಶಿಕ್ಷಕ ಬಸನಗೌಡ ಜಿ ಪಾಟೀಲ ಸರ್ವರನ್ನೂ ವಂದಿಸಿದರು.

ವರದಿ: **ಅನಿಲ್ ಕುಮಾರ್ ಬಿರಾದಾರ್,** ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಯಾದಗಿರಿ ಜಿಲ್ಲೆ

**ಜಗನ್ಮಾತೆಯ ಕೇವಲ ಒಂದು ಕಿಡಿಯಾದ ನಮ್ಮ ಜನ್ಮದಾತೆ ತಾಯಿಯನ್ನು ಪೂಜಿಸಿದರೂ ಅದು ನಮ್ಮನ್ನು ಮಹತ್ತಿನ ಕಡೆ ಒಯ್ಯುವುದು.**

**– ಸ್ವಾಮಿ ವಿವೇಕಾನಂದ**

# ವಿದ್ಯಾರ್ಥಿ ಮಿತ್ರ – 23





## ಪದಬಂಧ

ಎಡದಿಂದ ಬಲಕ್ಕೆ

1. ಚಂದ್ರನಿಲ್ಲದ ಮಹಾದಿನ (8)
6. ಆನೆಗಳ ಒಡೆಯ (4)
8. ಕರ್ನಾಟಕದ ಅತಿ ಎತ್ತರದ ಜಲಪಾತ (4)
10. ಮೃದುವಾದ ಮಾತು (4)
11. ಜೇನು ತುಂಬಿದ ತೋಟ (4)
13. ಪೂರ್ಣವಲ್ಲದ್ದು (4)
14. ರನ್ನಮಣಿಗಳ ಮಾಲೆ (4)
16. ಉತ್ತರ ಪತ್ರಿಕೆಯ ಕಚ್ಚಾ ಪ್ರತಿ (8)

ಮೇಲಿಂದ ಕೆಳಕ್ಕೆ

2. ಲವನ ವಿವಾಹಕ್ಕೆ ತಂದ ಸರಕು ಸಾಮಗ್ರಿ (4)
3. ಕೇಡಿಯಂಥವನಿಗೆ ಮರ್ಯಾದೆ ಇರುವುದಿಲ್ಲ (4)
4. ಇದು ಆಕಾಶದಲ್ಲಿ ಹಾರುತ್ತದೆ (2)
5. ಹಣ್ಣಿನ ಮೇಲ್ಭಾಗ (2)
7. ಹೆಂಗಸರು ಉಡುವ ಕಲಾಪತ್ತಿನ ಬಟ್ಟೆ (8)
9. ಸೋನಾಳಿಗೆ ಕೊಡಲು ಅರೆದು ತಂದ ಚಿನ್ನಕ್ಕೆ ಮಾಡಿದ ಕುಸುರಿ ಕಾಯಕ (6)
11. ತೋರ್ಪಡಿಸದಂತೆ ಅಡ್ಡ ಹಾಕು (4)
12. ಮನುಷ್ಯರಲ್ಲಿ ಇವನು ಶೂರ (2)
13. ಇವರು ಜನಕ (2)
15. ಕಸದಿಂದ ಇದನ್ನು ಮಾಡಬಹುದು (2)




– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

## ಕಾರ್ಯಕಾರಿಣಿ ಸಭೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ದಿನಾಂಕ 27–3–2016 ರಂದು ಭಾನುವಾರ ಬೆಳಗ್ಗೆ 10.30 ಗಂಟೆಗೆ ವಿಶ್ವಮಾನವ ಪ್ರೌಢಶಾಲೆ, ಕೊಮ್ಮೇರಹಳ್ಳಿ, ಮಂಡ್ಯ ತಾಲೂಕು, ಮಂಡ್ಯ ಇಲ್ಲಿ ಕರೆಯಲಾಗಿದೆ. ಅಪೇಕ್ಷಿತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿಗಳು

1. ಶಿವಾನಂದ ಸಿಂಧನಕೇರಾ – 93432 11679
2. ಚಿಕ್ಕಸ್ವಾಮಿ – 9844100405
3. ಚಂದ್ರಶೇಖರ್ – 9448588746
   (ರಾಜ್ಯ ಪ್ರಧಾನ ಕಾರ್ಯದರ್ಶಿ)

> ವಿಶ್ವವೆಲ್ಲಾ ಏಕ ಅಲ್ಲಿ ಮತ್ತೊಂದಿಲ್ಲ. ನಾವೆಲ್ಲ ಏಕತ್ವದ ಕಡೆಗೆ ಹೋಗುತ್ತಿರುವೆವು. ಒಂದರಲ್ಲಿ ಎಷ್ಟೊಂದು ಇಚ್ಛೆಗಳು ಸೇರುತ್ತಿವೆ ! ಈ ಏಕತೆಯ ಸಾಕ್ಷಾತ್ಕಾರವೇ ಜ್ಞಾನ ಮತ್ತು ವಿಜ್ಞಾನ. ಏಕತೆಯೇ ಜ್ಞಾನ, ಭಿನ್ನತೆಯೇ ಅಜ್ಞಾನ. ಈ ಜ್ಞಾನವೇ ನಿಮ್ಮ ಆಜನ್ಮ ಸಿದ್ಧಹಕ್ಕು.
>
> – ಸ್ವಾಮಿ ವಿವೇಕಾನಂದ

## ವಿದ್ಯಾರ್ಥಿ ಮಿತ್ರ 23 ರ ಉತ್ತರ

### ಪದಬಂಧ

ಎಡದಿಂದ ಬಲಕ್ಕೆ

1. ಮಹಾಲಯ ಅಮಾವಾಸ್ಯೆ
6. ಗಜಪಡೆ
8. ಗೇರುಸೊಪ್ಪೆ
10. ಮೆಲುನುಡಿ
11. ಮಧುವನ
13. ಬರೆ ಬರೆ
14. ರತ್ನ ಸರ
16. ಕರಡು ಉತ್ತರ ಪ್ರತಿ

ಮೇಲಿನಿಂದ ಕೆಳಕ್ಕೆ

2. ಲವಾಜಮೆ
3. ಮಾನಗೇಡಿ
4. ಖಗ
5. ಸಿಪ್ಪೆ
7. ಜರತಾರಿ ಸೀರೆ
9. ಸೊನ್ನಾರೆಗೆಲಸ
11. ಮರೆಮಾಡು
12. ನರಶೂರ
13. ಅಪ್ಪ
15. ರಸ

# ಬೋಧನೆ ವೃತ್ತಿಯಲ್ಲ– ಸೇವೆ : ಪ್ರೊ॥ ಕೃ ನರಹರಿ

## (Teaching is not profession but mission )




ಬೋಧನೆಯನ್ನು ಕೇವಲ ವೃತ್ತಿಯಾಗಿ ಸ್ವೀಕರಿಸದೆ ಶಿಕ್ಷಕರು ಸೇವಾ ಮನೋಭಾವದಿಂದ ದುಡಿಯಬೇಕು. ಆಗ ಶಿಕ್ಷಕ ವೃತ್ತಿಯ ಸಾರ್ಥಕತೆಯಾಗುತ್ತದೆ. ಶಿಕ್ಷಕರು ಈ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಪ್ರೊ॥ ಕೃ ನರಹರಿಯವರು ಶಿಕ್ಷಕರಿಗೆ ಕರೆನೀಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಪೋಷಕರಾದ ಪ್ರೊ॥ ನರಹರಿಯವರು ಸಂಘದ ಬೆಂಗಳೂರು ಉತ್ತರ ಜಿಲ್ಲೆಯು 26.01.2016 ರಂದು ಏರ್ಪಡಿಸಿದ್ದ ಸಂಕಲ್ಪದಿನಾಚರಣೆಯ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತನಾಡಿ ಶಿಕ್ಷಣದ ಬಗೆಗಿನ ಕಳಕಳಿಯನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾಜಿ ಮಂತ್ರಿಗಳೂ, ಶಾಸಕರೂ ಆದ ಶ್ರೀ ರಾಮಚಂದ್ರೇಗೌಡರು ಗುರು–ಶಿಷ್ಯ ಪರಂಪರೆಯ ಮಹತ್ವವನ್ನು ಕುರಿತು ಮಾತನಾಡಿದರು. ಮಹಾಭಾರತದ ದ್ರೋಣಾಚಾರ್ಯರು–ಏಕಲವ್ಯನ ನಿದರ್ಶನವನ್ನು ಅವರು ನೀಡಿದರು. ಆ ಮೂಲಕ ಅವರು ಶಿಷ್ಯ ಶ್ರದ್ಧೆ, ವಚನ ಪರಿಪಾಲನೆ, ಏಕಾಗ್ರತೆ, ಸ್ವಪ್ರಯತ್ನಗಳ ಸಾಕಾರತೆಯನ್ನು ಏಕಲವ್ಯನಲ್ಲಿ ಕಾಣಬಹುದು ಎಂದು ತಿಳಿಸಿದರು.

ಸಂಕಲ್ಪ ದಿನಾಚರಣೆಯ ಈ ಸಂದರ್ಭದಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ ಜೋಷಿಯವರು ಸಂಕಲ್ಪದ ಉದ್ದೇಶ ಮತ್ತು ಪ್ರಸ್ತುತತೆಯನ್ನು ತಮ್ಮ ಪ್ರಾಸ್ತಾವಿಕದಲ್ಲಿ ನುಡಿದರು. ಸಮಾರಂಭದಲ್ಲಿ ಪಾಲ್ಗೊಂಡಿದ್ದ ನೂರಾರು ಶಿಕ್ಷಕರಿಗೆ ಶ್ರೀ ಹೆಚ್. ನಾಗಭೂಷಣ್ ರಾವ್, ಪೋಷಕರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಸಂಕಲ್ಪ ಬೋಧಿಸಿ ಅದರ ಪಾವಿತ್ರ್ಯತೆಯನ್ನು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲೆಯ ಈ ಕಾರ್ಯಕ್ರಮದಲ್ಲಿ ಬಾಪೂಜಿ ಸೇವಾ ಟ್ರಸ್ಟ್, ಸ್ವಾಮಿವಿವೇಕಾನಂದ ಪಬ್ಲಿಕ್ ಟ್ರಸ್ಟ್ ಹಾಗೂ ರಾಧಾಕೃಷ್ಣ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ ಪ್ರೊ॥ ಕೃ.ನರಹರಿ, ಶ್ರೀ ಜಿ.ಎಸ್.ಕೃಷ್ಣಮೂರ್ತಿ, ಶ್ರೀ ಹೆಚ್.ನಾಗಭೂಷಣ್ ರಾವ್, ಶ್ರೀಮತಿ ಆರ್. ಸೀತಾಲಕ್ಷ್ಮಿ ಹಾಗೂ ಡಾ॥ ಐ.ಎ.ಲೋಕಾಪುರ್ ಇವರುಗಳಿಗೆ ಗುರುಪೂಜೆಯನ್ನು ನೆರವೇರಿಸಿ ಗೌರವಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಗಣನೀಯ ಕೊಡುಗೆ ನೀಡುತ್ತಿರುವ 220 ಶಿಕ್ಷಕರಿಗೆ ಬಾಪೂಜಿ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ಡಾ॥ ಐ.ಎ. ಲೋಕಾಪುರ್‌ರವರು ಗುರುಪೂಜೆಯ ಪಾವಿತ್ರ್ಯತೆಯ ಬಗ್ಗೆ ತಿಳಿಸಿದರು. ಗುರುಪೂಜೆಯ ಈ ಕಾರ್ಯಕ್ರಮಕ್ಕೆ ತಾವು ಪೂಜೆಮಾಡಿದ ರುದ್ರಾಕ್ಷಿಯನ್ನು ಧರಿಸಿ ಬಂದಿರುವುದಾಗಿ ತಿಳಿಸುತ್ತಾ ಗುರುಪಾದಪೂಜೆಯ ದೈವತ್ವವನ್ನು ಸಭೆಗೆ ತಿಳಿಸಿದರು.

ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ಜಂಟಿ ಕಾರ್ಯದರ್ಶಿಗಳಾದ ಆರ್.ಸೀತಾಲಕ್ಷ್ಮಿ, ಮಾಧ್ಯಮಿಕ ಶಿಕ್ಷಕ ಸಂಘದ ಪ್ರಾಂತೀಯ ಶಿಕ್ಷಣ ವಿಭಾಗದ ಪ್ರಮುಖರಾದ ಬಿ.ಕೆ ವರಲಕ್ಷ್ಮಿ ಮುಂತಾದವರು ಭಾಗವಹಿಸಿದ್ದ ಸಮಾರಂಭದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಡಾ॥ ಸೂಗೂರು ತಿಪ್ಪೇಸ್ವಾಮಿಯವರು ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಬಿ.ಟಿ ಚಂದ್ರಮೌಳಿಯವರು ವಂದನಾರ್ಪಣೆ ನೆರವೇರಿಸಿದರು.

ವರದಿ: ಎಸ್. ವಿಜಯಕೃಷ್ಣ, ಸಮಿತಿ ಸದಸ್ಯರು, ಬೆಂಗಳೂರು ಉತ್ತರ ಜಿಲ್ಲೆ

---

ನಮಗಿಂದು ಬೇಕಾಗಿರುವುದು ಸಂಘಟನೆ. 'ಸಂಘಟನೆ' ಎಂದರೆ ಕಾರ್ಯಭಾರ ಹಂಚಿಕೊಳ್ಳುವಿಕೆ ಎಂದರ್ಥ. ಅದರಲ್ಲಿ ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಕ್ಕೆ ಅನುಗುಣವಾದ ಯೋಗದಾನ ನೀಡುತ್ತಾನೆ. ಹೀಗೆ ಎಲ್ಲರ ಸಾಮರ್ಥ್ಯವೂ ಸೇರಿ ಸಮನ್ವಯದ ಆದರ್ಶವನ್ನು ಸಾಧಿಸುತ್ತದೆ. ಈ ಬಗೆಯ ವಿಸ್ತರಣೆಯೇ ಜೀವನ, ಸಂಕುಚಿತತೆಯೇ ಮರಣ. ಸ್ವಂತ ಸುಖವನ್ನೇ ಅರಸುತ್ತಾ ಸೋಮಾರಿಯಾಗಿ ಕಾಲ ಕಳೆಯುವ ಸ್ವಾರ್ಥಿಗೆ ನರಕದಲ್ಲೂ ಸ್ಥಳವಿಲ್ಲ. ನಿಮ್ಮ ಜಡತೆಯ ನಿರಾಶಾಭಾವವನ್ನು ಕಿತ್ತು ಬಿಸುಟು, ಟೊಂಕ ಕಟ್ಟಿ ಸಿದ್ಧರಾಗಿ, ನೀವೆಲ್ಲಾ ಕಾರ್ಯೋನ್ಮುಖರಾಗಬೇಕಾಗಿದೆ....

– ಸ್ವಾಮಿ ವಿವೇಕಾನಂದ

---

ಶ್ರದ್ಧಾಂ ಪ್ರಾತರ್ಹ ಭಾಮಹೇ ಶ್ರದ್ಧಾಂ ಮಧ್ಯಂ ದಿನಂ ಪರಿ ।

ಶ್ರದ್ಧಾಂ ಸೂರ್ಯಸ್ಯ ನಿಮ್‌ರುಚಿ ಶ್ರದ್ಧೇ ಶ್ರದ್ಧಾಪಯೇಹ ನಹ ॥

"ದಿನದ ಪ್ರಾರಂಭದಲ್ಲಿಯೂ, ಮಧ್ಯದಲ್ಲಿಯೂ ಮತ್ತು ಕೊನೆಯಲ್ಲಿಯೂ ನಾವು ಶ್ರದ್ಧೆಯನ್ನು ಪೂಜಿಸುತ್ತೇವೆ. ಹೇ, ಶ್ರದ್ಧೆ ನಮ್ಮನ್ನು ಶ್ರದ್ಧಾವಂತರನ್ನಾಗಿ ಮಾಡು. ಶ್ರದ್ಧೆಯು ಮಂಗಳಮಯಿ ತಾಯಿಯಂತೆ. ಯೋಗಿಯನ್ನು ರಕ್ಷಿಸುತ್ತದೆ ಎಂದು ವ್ಯಾಸ ಮಹರ್ಷಿಗಳು ಶ್ರದ್ಧೆಯನ್ನು ಕೊಂಡಾಡಿದ್ದಾರೆ.

–ಶ್ರದ್ಧಾಸೂಕ್ತ

# ಚಿತ್ರ ಸುದ್ದಿ



ಗುಲ್ಬರ್ಗಾ ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಯ ಕುರಿತ ಕಾರ್ಯಾಗಾರದ ಉದ್ಘಾಟನೆ ಮಾಡುತ್ತಿರುವ ಡಿಡಿಪಿಐ ಶ್ರೀ ಸುಳ್ಳದ ಮತ್ತು ಇತರ ಗಣ್ಯರು



ಬಳ್ಳಾರಿ ಜಿಲ್ಲಾ ಘಟಕದಲ್ಲಿ ನಡೆದ ಸಂಕಲ್ಪ ದಿನಾಚರಣೆಯಲ್ಲಿ ಗಣ್ಯ ಅತಿಥಿಗಳು



ಯಾದಗಿರಿಯಲ್ಲಿ ಇತ್ತೀಚೆಗೆ ನಡೆದ ಸ್ವಾಮಿ ವಿವೇಕಾನಂದರು ಮತ್ತು ಸುಭಾಷ್ ಚಂದ್ರ ಬೋಸರ ಜಯಂತಿ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾದ ಶಾಸಕ ಅಮರನಾಥ ಪಾಟೀಲ್ ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ

**FEBRUARY 2016**
Date of Posting
20th or 21st of every month

Registered No. RNI 45459/85
RNP/KA/BGS-125/2015-2017
Posted at Bangalore PSO
Bangalore -560 026

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com